ಲೇ:- ನರಹರ ರಾಮಚಂದ್ರ ಕನೆಟಕರ

1922

ಪಾರ್ವತಿ ಪರಿಣಯ.

ಸಂಪಾದಕ

ನರಹರ ರಾಮಚಂದ್ರ ಕನಮಡಿ

ವಕೀಲ, ವಿಜಾಪೂರ.

ಮೊದಲನೇ ಆವೃತ್ತಿ ೧೦೦೦ ಪ್ರತಿಗಳ.

ಸನ್ ೧೯೩೧ ಇ.

ಬೆಲೆ ೧೨ ಆಣೆಗಳು.

FOREWORD.

With the publication of this poem is brought out the first poetical production of an author unknown to fame till now as he commenced his literary activities rather late in life. The author is a pleader at Bijapur who, having retired from his profession, took to poetry with the sole and whole object of rendering some material service to the Kannada language, which is showing sure signs of rapid decay. None, who has a sufficient knowledge of the modern position which the language occupies, can deny that two factors are primarily responsible for such a state of things, viz (1) the lack af encouragement on the part of the people to such writers as show promise of literary ability; (2) the division of the land on a basis contrary to the linguistic principle. The second factor requires the consent co-operation of the several Governments under which the Karanatak is at present divided, and may perhaps for all practical purposes, be set down as well-nigh impracticable. But the first is apparently one, which can be, in no time, set right, provided that all seriously begin to work for it and which is futher, in my opinion, mainly responsible for the unhappy condition of our language. It may be said, that every author, like a river, is small at the outset, who, as he proceeds with his work, gradually tends towards perfection and that, his assiduous task generally keeps pace with the sympathy anb encouragement from the public. As a general rule [illegible] to ensure a

rapid succession of good authors, the main spring of the throbbing life of any language, an appreciative reception of would be-good writers at the hands of the educated public, is a neces. sary condition. It is also a fact, that every author begins his work with a fervent hope that his production will be appreciated by the people in a manner, that will give further impetus to his future work. And the state of such a man, who has the misfortune to receive a cold or indifferent reception at the hands of the public, may be better imagined than described. The very few authors, who devote their time to literary work in their mother tongue, engage themselves in translating foreign authors. The present author is to be congratulated upon his not following this tempting course but turning to Sanskrit poetry the perennial spring from which we derive life and joy giving fluid or Rasa, for his inspiration. Kalidas, the master poet has been the joy of the educated mind of the world in general, and of this country in particular for centuries together. And I believe the present author has done well to turn to him for his maiden work. The present poem is a free translation of a portion of Kumar Sambhava, describing the marriage of Parvati, the embum of Prakriti, with Shiva, the emblem of पुरुष from whose union we believe, the whole world to have been born.

This being an introduction to a poem, I make no apology for the consideration of a few points regarding poetry proper. Different people have given different definitions, out of which, I would like to considar only three of them, identical in essence, though different in

words, carrying along with them a fine illustration of the proposition that truth is one, though described from different stand-points. The famous critic and philosopher Carlyle says " For my part I find considerable meaning in the old vulgar distinction of poetry being metrical, having music in it, being a song." Then he establishes that " If your delineation be authentically *musical*, musical not in word only, but in heart and substance, in all the thoughts and utterances of it, in the whole conception of it, then it will be poetical; if not, not. " He describes a " musical thought' as one " spoken by a mind that has penetrated into the inmost heart of the thing, detected the inmost mystery of it namely the melody that lies hidden in it, the inward harmony of coherence which is its soul, whereby it exists, and has a right to be, here in this world." He further adds " The meaning of song goes deep. Who is there that, in logical words, can express the effect music has, on us? A kind of inarticulate unfathomable speech, which leads us to the edge of the Infintite, and lets us for moments gaze into that. " He concludes by saying that ''Poetry is musical thought. The poet is one who thinks in that manner' See deep enough and you see musically; the heart of Nature being every where music, if you can only reach it.,, This is Carlyle's view and let me compare this with that of M. Arnold, the celebrated poet o 'septicism. His most famous critical dictum is that 'Poetry is a criticism of life. " What he seems to have meant is that " Poetry is a crowning fruit of a criticism of life: that just as the poet's metrical effects are and

must be, the result of a thousand semi-conscious generalistions upon the laws of Cause and Effect in metric art, so the beautiful things he says about life and the beautiful pictures he paints of life, are result of his generalisations upon life, as he passes through it, and consequently that the value of his poetry consists in the beauty and the truth of his generalisations " A little reflection will at once discover the identity of the definitions in substance. Lastly let me consider the view of the famous Sanskrit rhetorician Mammata Says he " तददोषौ शद्बार्थौ सगुणावलंकृती पुनःक्वापि " that is, it (poetry) is word and sense, with qualites without faults and someti mes without figures of speech. His idea seems to be that faultless words and meanings do of necessity involve " generalistions" of Arnold and " going deep in. to the matter " of Carlyle. We are now in afair position to see what consitutes real poetry in the opinion of both oriental and occidental rhetoricians

Judging by this standard, the present poem will be found to possess merits of a high order. The poem, with its best portions, may appropriately be compared to a mountain, with some peaks of extreme height. There is a strange combination of opposite sentiments properly set in so as to form a harmonious whole

In the first part is exquisitely described with a powerful poetic pen, the bewildered state of mind of Rati at the demise of her husband. In the course of Rati's bewailing is skillfully depicted the शृंगार rasa which, the poet has taken care, not to allow to degenerate into बिभत्स, a temptation to which many a poet falls a vicim. The vilapa in itself, can adequately yield

some morals—enjoyments lose their sweetness without a partner to share them; a friend in need is a friend in deed. &c. In the second part, we ascend the second peak After faithfully depicting the piercing penance of Parvati, the poet has most skilfully arranged a series of questions and answers between the बटु (imp), Shiva incognito, and Parvati. The reader is simply charmed with the arguments of the बटु (imp) against Parvati's marrying Shiva and more so with her replies fully cogent and telling. The whole dialogue is extremely graphic as well as exhilrating. Parvati is so strongly in love with Shiva that, after trying to convince the बटु (imp), who would not but follow his own chain of reasoning she actuallly tries to walk out of his presence when he begins to abuse the object of her love and adoration. This part is also full of generalisations, the quint-essence of poetry.

The third part, being evidently the concluding portion, rises still higher and leads us to the giddy heights of philosophy. Shiva's qualities are extolled in apparently contradictory terms by the सप्तर्षि, to under-stand which one has to tax his brains a bit, an exercise, which is salutary and at the same time ennobling. Then we have a graphic decription of the Himalayas, the happiest of its kind While reading the lines, the mind is so captivated as to lose its distinct existence. The last scene, describing the offering of Parvati in marriage by her father to Shiva, and the blessings poured upon the bride by अरुंधती is touching to the core and cannot but appeal to every one. Again we have the conclusion in the inimitable Tennysonian fashion, worthy of the author and the poem.

Some are of opinion that simplicity of language indicates lack of command over the same, but our experience of the works of the truly learned, contradicts this view. As an illustration, I might draw the attention of the reader to the language of the Maha-Bharat and Ramayana. The author's aim, in composing simple, yet eloquent poetry, is to make the poem intelligible to the ordinary public and thus creat taste in them for poetry in their mother-tongue. The words flow like a smooth rive without a ripple, but deep with meaning. The metre भामिनी शट्पदी is pre-eminently suited for this kind of poetry, and the author shows a decided command over his verse H does not smell of the lamp. When one takes into consideration the strict rules of alliteration in Kanarese prosody, one has to admire the author,s easines in composition. The poem may be ushered into public notice with the full confidence of a warm welcome. If the introduction had been entrusted to a Kanarase scholar, the public at large, in my opinion, would have benefit ed more. I must confess, that my knowledge of Kanada is very poor, though it happens to be my mother-tongue. Who is responsidle for such a state of things, will be a point outside the scope of this introduction, though worthy of serious consideration by all true sons of the Karnatak. My appreciation would be that of a layman and not of a scholar and may be taken for what it is worth. Not-with-standing the apprehension of my being unequal to the task, I have undertaken to write this foreword out of pure friendship and admiration for the author, who, I know, commenced to study Sanskrit at an age, when others would be on their tip-toe to give up all study and take up complete rest, with the simple of

object of enriching his mother-tongue with works of his own. This poem is the first of a series which he is contemplating to publish in the near future; and I hope the other poems would come out in quick succession from his facile pen. May he be spared long in the service of Saraswati, who is sure to be pleased with his sweet creations. One need not be afraid of a possible cold reception of one's work, but keep in mind the famous lines of one of the most famous poets of England, Lord Byron:-

I twine

My hopes of being remembered in my line
With my land's language if too fond and far
These aspirations in their scope incline
If my fame should be, as my fortunes are,
Of hasty growth and blight, and dull oblivion bar
My name from out the temple where the dead
Are honoured by the nations-let it be-
And light the laurels on a loftier head
And be the Spartan's epitaph on me-
" Sparta hath many a worthier son than he "

— S. V. Kaujalgi.

Dedicated to,

K. S. Hungund Esq. B. A.

Acting Educational Inspector

Southern Division.

IN TOKEN OF

His keen interest for the Kannada language and the friendship which he bears for the author.

By his kind permission.

By the Author.

—॥ श्री ॥—

श्री मत्कृष्णपदाङ्किताय यशसा ख्याताय कर्नाटके ।
हून्गुदेत्युपनामकायच गिरा संसेविताय श्रिया ॥
तन्नाना गुणलोलुपेन नृहरी त्याख्यामिमां बिभ्रता ।
श्री कर्नाटक पार्वती परिणयं सत्काव्यमद्यार्पितम् ॥ १ ॥

विजायपुरम्
सिद्धार्थिनिवत्सरे
मार्गशीर्ष शु० ९.

कनमडीत्युपाख्यान्वितेन
ग्रंथकर्त्रा.

ಅಭಿಪ್ರಾಯಗಳು.

ವಿಜಾಪುರದ ವಕೀಲರಾದ ಶ್ರೀಯುತ ನರಹರರಾವ ಕನಮುಡಿ ಇವರು ನಮ್ಮ ಕಡೆಗೆ ತಾವು ರಚಿಸಿದ "ಪಾರ್ವತೀ ಪರಿಣಯ" ವೆಂಬ ಕಾವ್ಯವನ್ನು ಅವಲೋಕನಾರ್ಥವಾಗಿ ಕಳಿಸಿರುವರು. ಇವರು ರಚಿಸಿದ ಬೇರೆ ಅನೇಕ ಕಾವ್ಯಗಳನ್ನು ನಾವು ನೋಡಿದ್ದೇನೆ. ಅವುಗಳಂತೆಯೇ ಪಾರ್ವತೀ ಪರಿಣಯವಾದರೂ ಚನ್ನಾಗಿ ಸಾಧಿಸಿದೆ. ರಾಯರಿಗೆ ಭಾಮಿನೀ ಷಟ್‌ಪದಿಯು ಕೈವಶವಾಗಿ ಹೋಗಿರುವದರಿಂದ ಕಾವ್ಯದ ಸರಣಿಯು ಸುಲಲಿತವಾಗಿ ಸಾಗಿದೆ. ಕುಮಾರ ಸಂಭವ, ಪಾರ್ವತೀ ಪರಿಣಯವೆಂಬ ನಾಟಕ ಹಾಗೂ ಪುರಾಣಾಂತರ್ಗತವಾದ ಕಥಾನಕಗಳ ಸಮ್ಮಿಶ್ರಣವನ್ನು ಮಾಡಿ ಶ್ರೀಯುತ ನರಹರರಾಯರು ಪ್ರಸ್ತುತವಾದ ಕಾವ್ಯವನ್ನು ರಚಿಸಿರುವದಾಗಿ ತೋರುತ್ತದೆ. ಅಲ್ಲಲ್ಲಿ ಕವಿಗಳ ಸ್ವತಂತ್ರವಾದ ಕಲ್ಪನೆಗಳೂ ಕಂಡು ಬರುತ್ತವೆ. ನವರಸಗಳಿಂದ ತುಂಬಿದ ನಾಟಕದಂತಿರುವ ಈ ಸಂಸಾರದಲ್ಲಿಯ ಅನೇಕವಾದ ಚಮತ್ಕಾರಗಳನ್ನು ಸ್ವಾನುಭವದಿಂದ ಕಂಡು ಹಿಡಿದವರಾದ ಶ್ರೀಯುತ ನರಹರರಾಯರಲ್ಲಿ ಕಾವ್ಯರಚನಾ ಚಾತುರ್ಯವು ಸಹಜವಾಗಿ ಉತ್ಪನ್ನವಾಗಿರುವದರಿಂದ ಅವರು ರಚಿಸಿದ ಕವಿತೆಗಳಾದರೂ ಮಾರ್ಮಿಕವಾಗಿವೆಯೆಂದು ಹೇಳಬಹುದು. ನಿಷ್ಠುರನಾದ ವೇದಾಂತಿಗೆ ಕಾವ್ಯದ ಸ್ವಾರಸ್ಯವಿರುವದಿಲ್ಲ. ಸೌಮ್ಯವಾದ ವೇದಾಂತ ಹಾಗು ಭಕ್ತಿ ಇವುಗಳಿಂದ ಕೂಡಿದ ಮನೋವೃತ್ತಿಯ ಪ್ರೇರಣೆ ಇಲ್ಲದೆ ರಚಿಸಿದ ಕಾವ್ಯವಾದರೂ ನಿರರ್ಥಕವಾಗುವದುಂಟು. ಶ್ರೀ ನರಹರರಾಯರು ನಿಶ್ಚಲವಾದ ಶಿವಭಕ್ತಿಯುಳ್ಳವರೂ ವೇದಾಂತದ ಮೂಲತತ್ವಗಳನ್ನು ಕಂಡುಕೊಂಡವರೂ ಆಗಿರುವದರಿಂದ ಅವರು ರಚಿಸಿದ ಈ ಪಾರ್ವತೀ ಪರಿಣಯನೆಂಬ ಕಾವ್ಯವು ಸರಸವಾಗಿರುವದಲ್ಲದೆ ಸರ್ವಾಂಶಗಳಿಂದ ಕೂಡಿದ್ದಾಗಿದೆಯೆಂದು ಹೇಳುತ್ತೇನೆ.

ವಾಸುದೇವಾಚಾರ್ಯ ಕೆರೂರ.

ನಮ್ಮ ಪರಮ ಮಿತ್ರರಾದ ಶ್ರೀಯುತ ನರಹರರಾವ ಕನಮುಡಿ ವಕೀಲ ವಿಜಾಪುರ ಇವರು ನಮ್ಮ ಕಡೆಗೆ ಕಳುಹಿಸಿದ " ಪಾರ್ವತೀ ಪರಿಣಯ " ಎಂಬ ಕಾವ್ಯವನ್ನು ಸಮಗ್ರವಾಗಿ ಓದಿದೆವು. ಸಂಸ್ಕೃತ ಭಾಷೆಯಲ್ಲಿರುವ ಕುಮಾರ ಸಂಭವ ಎಂಬ ಮಹಾಕಾವ್ಯವನ್ನೂ ಪಾರ್ವತೀ ಪರಿಣಯ ಎಂಬ ನಾಟಕವನ್ನೂ ಪ್ರಾಮುಖ್ಯವಾದ ಆಧಾರವನ್ನಾಗಿಟ್ಟುಕೊಂಡು ವಿಸ್ತೃತವಾದ ಸಂಸ್ಕೃತ ವಾಙ್ಮಯದ ವಾಚನದಿಂದ ತಮ್ಮಲ್ಲಿ ಸ್ವಾಭಾವಿಕವಾಗಿ ಬಂದ ಅನೇಕ ವರ್ಣನಾತ್ಮಕ ವಿಷಯಗಳು ಒಳವಡುವಂತೆ ಸುಲಭವಾದ ಶೈಲಿಯಿಂದಲೂ ಪಂಡಿತ ಪಾಮರರಿಗೂ ರಂಜನವಾಗುವಂತೆಯೂ ಬರೆದಿರುವ ಶ್ರೀಯುತ ನರಹರರಾಯರ ಈ ಕಾವ್ಯವನ್ನು ಓದಲು ನಮಗೆ ಅತ್ಯಾನಂದವೆನಿಸಿತು. ಸದ್ಯಕ್ಕೆ ಮೃತಭಾಷೆಗಳ ಮಾಲಿಕೆಯಲ್ಲಿ ನಮ್ಮ ಆ

ರ್ಯಸಂಸ್ಕೃತಿಯ ಮೂಲಾಧಾರವಾದ ಸಂಸ್ಕೃತ ಭಾಷೆಯ ಸಮಾವೇಶವಾಗಿರುವದು ಕೇವಲ ಖೇದಕರವಾದ ಸಂಗತಿಯು. ಸಾವಿರಾರು ವರ್ಷಗಳ ಹಿಂದೆ ಸುಧಾರಣೆಯ ಉಚ್ಚ ಶಿಖರಕ್ಕೆ ಮುಟ್ಟಿದ ನಮ್ಮ ಪೂರ್ವಜರ ಉದಾತ್ತ ವಿಚಾರಗಳು ಅನೇಕ ಕಾವ್ಯ ನಾಟಕಗಳಲ್ಲಿ ತುಂಬಿಕೊಂಡಿದ್ದರೂ ಸಂಸ್ಕೃತ ಭಾಷೆಯ ಅಧ್ಯಯನವನ್ನೇ ಬಿಟ್ಟುಕೊಟ್ಟ ನಮ್ಮ ಅರ್ವಾಚೀನ ಜನತೆಗೆ ಅವು ಇದ್ದೂ ಇಲ್ಲದ ಹಾಗಾಗಿರುವವು. ಸುಲಭವಾದ ಭಾಷೆಯಲ್ಲಿ ಬರೆದ ಪುರಾಣಗಳನ್ನು ಓದಿ ತಿಳಿದುಕೊಳ್ಳುವದು ಕೂಡ ನಮ್ಮಲ್ಲಿಯ ಬೆರಳಿನಿಂದ ಎಣಿಸುವಷ್ಟು ಜನರಿಗೆ ಮಾತ್ರ ಸಾಧ್ಯವಾಗಿರುವದು. ಅಷ್ಟು ಸ್ವಲ್ಪ ಜನರಲ್ಲಿ ಶ್ರೀಯುತ ನರಹರರಾಯರ ಗಣನೆಯು ನಿಃಸಂದೇಹವಾಗಿ ಆಗುವದು. ಪಂಡಿತರನ್ನು ತಲೆದೂಗಿಸುವಂಥ ಮಹಾಕಾವ್ಯಗಳನ್ನು ರಚಿಸುವದು ಈ ರಾಯರ ಮುಖ್ಯ ಉದ್ದೇಶವಾಗಿಲ್ಲ. ಇವರ ಮುಖ್ಯ ಉದ್ದೇಶವು ಹಿಂದಕ್ಕೆಬಿದ್ದ ಕನ್ನಡ ಭಾಷೆಯ ಸೇವೆಯನ್ನು ಮಾಡಿ, ತನ್ಮೂಲಕ ಹೆಚ್ಚಿನ ತರಗತಿಯ ಶಿಕ್ಷಣವನ್ನು ಹೊಂದಿರುವ ಸ್ತ್ರೀಯರು ಚಿಕ್ಕ ಬಾಲಕರು ಮೊದಲಾದವರು ಸಹಜವಾಗಿ ಓದಿ ತಿಳಿದುಕೊಳ್ಳುವಂಥ ಭಾಷೆಯಿಂದಲೂ, ಶೈಲಿಯಿಂದಲೂ ಸಂಸ್ಕೃತಭಾಷೆಯಲ್ಲಿರುವ ಉತ್ಕೃಷ್ಟಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಬೇಕೆಂಬದೇ. ಈ ಕೆಲಸಕ್ಕೆ ರಾಯರು ಸರ್ವಥೈವ ಯೋಗ್ಯರಿರುವರು. ಇವರು ರಚಿಸಿದ ರಘುವಂಶಕಾವ್ಯವನ್ನು ನಾವು ಓದಿರುವೆವು. ಇವರು ಬರೆದ ಒಂದೆರಡು ನಾಟಕಗಳೂ ನಮ್ಮ ಅವಲೋಕನದಲ್ಲಿ ಬಂದಿರುವವು. ವರ್ತಮಾನ ಪತ್ರಗಳಲ್ಲಿ ಇವರು ಬರೆದ ಕವಿತೆಗಳನ್ನು ನಾವು ಆಗಾಗ್ಗೆ ಓದಿರುವೆವು. ಇದರಿಂದ ರಾಯರಿಗೆ ಕನ್ನಡ ಭಾಷೆಯಲ್ಲಿ ಬರೆಯುವದು ವಿಶೇಷವಾಗಿ ಭಾಮಿನೀಷಟ್ಪದಿಯಲ್ಲಿ ಬರೆಯುವದು ಚನ್ನಾಗಿ ಸಾಧಿಸಿರುವದೆಂದು ನಮಗೆ ಒಡೆದು ತೋರುತ್ತದೆ. ಹೀಗೆ ಕನ್ನಡದ ಶೈಲಿಯನ್ನು ಕೈವಶ ಮಾಡಿಕೊಂಡ ಶ್ರೀಯುತ ನರಹರರಾಯರು ತಮ್ಮ ಆಯುಷ್ಯಕ್ರಮದ ಉತ್ತರಾರ್ಧದಲ್ಲಿ ಭಾಷಾ ಸೇವೆಯನ್ನು ಕೈಕೊಂಡದ್ದು ಕರ್ನಾಟಕಸ್ಥರ ಸುದೈವವೆಂದು ನಾವು ಭಾವಿಸುತ್ತೇವೆ. ಈ ರಾಯರು ತಮ್ಮ ಪೂರ್ವ ವಯಸ್ಸಿನಲ್ಲಿ ರಸಿಕರೂ, ನಿಶ್ಚಲವಾದ ಶಿವಭಕ್ತಿಯುಳ್ಳವರೂ ಆಗಿದ್ದದರಿಂದ ಕಾವ್ಯರಚನೆಗೆ ಅವಶ್ಯವಾದ ಕಾರಣ ಸಾಮಗ್ರಿಗಳು ಇವರಲ್ಲಿ ಸ್ವಾಭಾವಿಕವಾಗಿ ಸಂಚಿತವಾಗಿರುವವು.

'ಪಾರ್ವತೀ ಪರಿಣಯ' ಎಂಬ ಕಾವ್ಯವು ಕೇವಲ ಸಂಸ್ಕೃತ ಗ್ರಂಥದ ಪರಿವರ್ತನವಲ್ಲ. ಕುಮಾರಸಂಭವದ ಶೋಕರಸ ಪ್ರಧಾನವಾದ ಭಾಗವು, ಈ ರಾಯರ ಕಾವ್ಯದ ಪ್ರಾರಂಭದಲ್ಲಿ ಬಂದಿದೆ. ಕ್ರಮ ಕ್ರಮದಿಂದ ಪುರಾಣಾಂತರ್ಗತವಾದ ಕಥಾನಕಗಳ ಸಮ್ಮಿಶ್ರಣವಾದರೂ ಯೋಗ್ಯಸ್ಥಳದಲ್ಲಿ ಆಗುತ್ತ ಹೋಗಿರುವದರಿಂದ ಶ್ರೀಯುತ ನರಹರರಾಯರ ಸ್ವತಂತ್ರವಾದ ಕವಿತಾ ಶಕ್ತಿಯು ಇದರಲ್ಲಿ

ದೃಗ್ಗೋಚರವಾಗುವದು. ಇಂಥ ಸ್ತುತ್ಯವಾದ ಉದ್ಯೋಗದಲ್ಲಿ ತೊಡಗಿದ ರಾಯರನ್ನು ಮನಃಪೂರ್ವಕವಾಗಿ ಅಭಿನಂದಿಸಿ ಇವರು ಕರ್ನಾಟಕ ಭಾಷಾಸೇವೆಯನ್ನು ನಿಷ್ಕಾಮ ಬುದ್ಧಿಯಿಂದ ಮಾಡುವಂತೆ ಪಾರ್ವತೀ ಪರಮೇಶ್ವರರು ಇವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಬೇಡಿ ಈ ಲೇಖವನ್ನು ಮುಗಿಸುತ್ತೇನೆ.

ಧಾರವಾಡ ಟ್ರೇನಿಂಗ ಕಾಲೇಜ
೧೨–೧೧–೧೯೩೧.

ರಾಮಚಂದ್ರ ಮಧ್ವ ಮಹಿಷಿ
ಪ್ರಿನ್ಸಿಪಾಲ.

ಶ್ರೀ.
ಸರ್ವಂ ಸಹಾಯ್ಯೈನಮಃ

ಧರ್ಮ ಭ್ರಾತಂ

ತಾವು ವಿಶ್ವಾಸಪೂರ್ವಕವಾಗಿ ಕಳುಹಿಸಿಕೊಟ್ಟ "**ಪಾರ್ವತೀ ಪರಿಣಯ**"ದ ಮುದ್ರಿತ ಪುಸ್ತಕವನ್ನು ಅತ್ಯಂತ ಸಂತೋಷದಿಂದ ಓದಿ ನೋಡಿದೆನು. ಮತ್ತು ಅದರೊಡನೆ ಕಳುಹಿಸಿದ್ದ "**ರಘುವಂಶ ಕಾವ್ಯ**" "**ಪೋಷ ಕೃತಮಾನವ ಮೀಮಾಂಸೆ**" ಇವೆರಡು ಗ್ರಂಥಗಳ ಮಾತೃಕೆಗಳನ್ನು ಅವಕಾಶವಿಲ್ಲದಿದ್ದುದರಿಂದ ಇಲ್ಲಲ್ಲಿ ಸ್ವಲ್ಪಸ್ವಲ್ಪವಾಗಿ ನೋಡಿದೆನು. ಅವಶ್ಯಕವಾಗಿ ವಿಶ್ರಾಂತಿ ಹೊಂದಿರ ಬೇಕಾದ ಈ ವಯಸ್ಸಿನಲ್ಲಿ ತಾವು ದೇಶ ಭಾಷೆಯ ಮೇಲಿನ ಅಚಲಪ್ರೇಮದಿಂದ ಅವಿಶ್ರಾಂತವಾಗಿ ಭಾಷಾಸೇವೆಗೆ ತೊಡಕಿರುವದನ್ನು ಕಂಡು, ಅದರಲ್ಲಿಯೂ, ನಮ್ಮ ಪೂರ್ವಜರಾದ ಕವಿ ವರರ ಉದ್ದಾಮ ಪಾಂಡಿತ್ಯವನ್ನೂ ನಮ್ಮ ಪೂರ್ವದ ದೇಶಪಾಲಕರ ಅತುಲೈಶ್ವರ್ಯದ ಮಹೋನ್ನತ ವೈಭವದ ಅಮಿತ ಪರಾಕ್ರಮಗಳಿಂದ ತುಂಬಿ ತುಳುಕಾಡುವ ಅದ್ಭುತ ಚರಿತೆಗಳನ್ನೂ, ನಮ್ಮ ದೇಶದವರೆಲ್ಲರೂ, ಮುಖ್ಯವಾಗಿ ಸಾಮಾನ್ಯ ಅಕ್ಷರ ಜ್ಞಾನವುಳ್ಳ ಮಹಿಳೆಯರು, ತಿಳಿದು ಆನಂದಿಸಬೇಕೆಂಬ ಸದುದ್ದೇಶದಿಂದ ಸುಲಭ ಶೈಲಿಯಲ್ಲಿ ಭಾಮಿನೀಷಟ್ಪದಿ ರೂಪದಿಂದ ರಚಿಸುತ್ತಿರುವುದನ್ನೂ ನೋಡಿ ಅತ್ಯಾನಂದವಾಯಿತು. ತಮ್ಮ ಪ್ರಯತ್ನವೂ ಉದ್ದೇಶವೂ ಅತ್ಯಂತ ಸ್ತುತ್ಯವಾದುದೆಂಬುದರಲ್ಲಿ ಸಂದೇಹವಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ಇಷ್ಟು ಹೇಳಬಲ್ಲೆನು--

"ಮೂರು ಗ್ರಂಥಗಳ ಕವಿತಾ ಸರಣಿಯೂ ಸಾಮಾನ್ಯರಿಗೆ ಕೂಡ ತಿಳಿಯುವಂತೆ ಸುಲಭ ರೀತಿಯಲ್ಲಿರುವುದು. ಭಾವ ಸ್ಫೂರ್ತಿ ಸರಿಯಾಗಿ ಕಾಣಿಸುತ್ತಿರುವುದು. ಅದರಲ್ಲಿ ಮುದ್ರಿತವಾಗಿರುವ ಪಾರ್ವತೀ ಪರಿಣಯದ ೧ ನೆಯಸರ್ಗದಲ್ಲಿಯ ರತಿ ವಿಲಾಪವು ಮಾರ್ಮಿಕವಾಗಿ ರಚಿತವಾಗಿರುವದು. ೩ನೆಯ ಸರ್ಗದ ವಟುವೇಷಧಾರಿ

ಯಾದ ಶಿವ–ತಪಸ್ವಿನೀಯಾಗಿರುವ ಗಿರಜಾ–ಇವರಸಂವಾದವೂ ಗಿರಿಜೆಯದ ಅಚಲವಾ ದಪತಿ ಭಕ್ತಿಯೂ ಉತ್ತಮವಾಗಿ ಸಾಧಿಸಲ್ಪಟ್ಟಿರುವುದು. ಭಾಷಾ ವಿಷಯದಲ್ಲಿ (ವ್ಯಾ ಕರಣ' ಛಂದಸ್ಸು ಮೊದಲಾದುವುಗಳಲ್ಲಿ) ಕೆಲವು ದೋಷಗಳಿರಬಹುದಾದರೂ ಅ ದು ಮುಂದಿನ ಮುದ್ರಣದಲ್ಲಿ ಪರಿಷ್ಕೃತವಾಗುವುದೆಂಬ ಭರವಸೆಯಿದೆ.

ರಘುವಂಶ ಕಾವ್ಯದ ಕವಿತೆಯು ಮೂಲ ಗ್ರಂಥದ ಶಬ್ದಶ: ಭಾಷಾಂತರೀಕರಣ ವಾಗಿದ್ದು, ಸುಲಭ ಗ್ರಾಹ್ಯವಾಗುವಂತೆಯೂ, ರಸವು ಕೆಡದಂತೆಯೂ ರಚಿತವಾಗಿ ರುವದು ಮನಸ್ಸಿಗೆ ಮತ್ತಷ್ಟು ಸಂತಸ ಪ್ರದವಾಗಿದೆ. ಇದನ್ನು ಮುದ್ರಣಕ್ಕೆ ಕೊ ಡುವ ಮೊದಲು ಸಾವಧಾನದಿಂದ ಪರಿಶೋಧಿಸಿ, ಅರ್ಥದೋಷ, ಶಬ್ದದೋಷ, ವ್ಯಾಕರಣ ದೋಷಗಳು ಬೀಳದಂತೆ ಶುದ್ಧವಾಗಿ ಮುದ್ರಿಸಿದರೆ ಶಾಲಾವಿದ್ಯಾ ರ್ಥಿಗಳಿಂದ ಮೊದಲು, ವೃದ್ಧರೂ, ಮನೆಗೆಲಸಗಳಿಂದ ಬೇಸತ್ತು ವಿರಾಮಕ್ಕಾ ಗಿ ಹರಟೆಗಳಲ್ಲಿ ಕಾಲ ಕಳೆವ ಮಹಿಳೆಯರೂ ಓದಿ ನೋಡಿ ಆನಂದ ಪಡಲು ತ ಕ್ಕಂತಾಗುವುದು.

ಮುಖ್ಯವಾಗಿ ಭಾಷಾಭಿಮಾನಿಗಳೂ ದೇಶೋದ್ಧಾರಕರೂ ಆದ ಮಹನೀ ಯರು ಇದನ್ನು ಸರ್ವತೋಮುಖವಾಗಿ ಪ್ರೋತ್ಸಾಹಿಸ ಬೇಕೆಂದೂ, ಸದ್ಯದಲ್ಲಿ ಮು ದ್ರಿತವಾಗಿರುವ ಪಾರ್ವತೀ ಪರಿಣಯ ಗ್ರಂಥವನ್ನು ಬಾಲಿಕಾ ಪಾಠಶಾಲೆಗೆ ಪಠ ನ ಗ್ರಂಥವಾಗಿಯೂ ಬಹುಮಾನ ಪುಸ್ತಕವಾಗಿಯೂ ಉಪಯೋಗಿಸುವುದರಿಂದ ಗ್ರಂಥ ಕರ್ತರ ಶ್ರಮಕ್ಕೆ ಸತ್ಫಲವನ್ನೂ ಬಾಲಿಕಾ ನಿವಹಕ್ಕೆ ಮಾತೃ ಭಾಷಾ ಪ್ರೇ ಮದೊಡನೆ ಸತೀ ಧರ್ಮ ಬೋಧೆಯನ್ನು ಉಂಟುಮಾಡಿಕೊಟ್ಟ ಪುಣ್ಯವನ್ನು ವಿದ್ಯಾಂಗದವರು ಪಡೆಯುವವರಾದಾರೆಂದೂ ಕೋರುವೆನು.

ಮು॥ ವಿಜಾಪುರ
ತಾ॥೨೨-೪-೨೦.

ಇಂತಾಶಿಸುವ ದೇಶೀಯ ಸೋದರಿ
ತಿರುಮಲಾಂಬಾ
ಸಂಪಾದಿಕಾ ಕರ್ಣಾಟಕ ನಂದಿನೀ.
(ನಂಜನಗೂಡು)

ಪಾರ್ವತೀ ಪರಿಣಯವು.

(ಸರ್ಗ ೧)

ರತಿವಿಲಾಪ.

ತಾರಕಾಸುರನಿಂದ ಶಕ್ರನು । ಬಾರಿಬಾರಿಗೆ ದ್ರೋಹಹೊಂದಲು ।
ಘೋರತಾಪವ ತಾಳಲಾರದೆ ಮಾರನನು ಕರೆದು ॥
ಧೀರ; ನೀಂ ಸುರಕಾರ್ಯಕಾಗಿಯೆ । ಮೂರು ಕಂಣಿನ ಹರನ ಮೋಹಿಸಿ ।
ಗೌರಿಯಂಕಿತನಾಗುವಂತೆಯೆ ತ್ವರದೆ ಮಾಡೆಂದು; ॥ ೧ ॥
ಅಪ್ಪಣೆಯ ಮಾಡಲ್ಕೆ ಗರ್ವದೆ । ದಪ್ಪಕನು ಪರಿವಾರದೊಂದಿಗೆ ।
ತಪ್ಪದೇ ಹೊರಟೆದ್ದು ನಡೆದನು ಶೀಘ್ರಗತಿಯಿಂದ ॥
ಮುಪ್ಪೊಳಲ-ಚುರ್ಚಿದನ ತಾಣಕೆ । ಸಪ್ಪಳಿಲ್ಲದೆ ಬಂದು ಸಮಯವ ।
ಜಪ್ಪಿಸೊಂದಿಸ ಹರನಮೋಹಿಪೆನೆಂದು ಮನಸಿನಲಿ ; ॥ ೨ ॥
ಹೊಂಚಿಸುತ್ತಿರೆ ಬಂದಳಲ್ಲಿಗೆ । ಚಂಚಲಾಕ್ಷಿಯು ಗಿರಿಜೆ ನೇಮದಿ ।
ಪಂಚವದನನ ಪೂಜೆಮಾಡುವದಕ್ಕೆ ಪ್ರೇಮದಲಿ ॥
ಕೊಂಚೆಯಾದೊಡೆ ಕಾಲಕಳೆಯದೆ । ಮಿಂಚಿನಂತೆಯೆ ಪೊಳೆವ ತನ್ನಯ ।
ಪಂಚಬಾಣಗಳಿಂದ ಮದನನು ಹೊಡೆದನೀಶನನು. ॥ ೩ ॥
ಇನಿತರಲಿ ದೇವಾಧಿದೇವನು । ತನಗೆ ಮಾಡಿದ ದ್ರೋಹವನ್ನುರೆ ।
ನೆನಿಸಿ ಯುರಿಗಣ್ದೆರೆದು ಮದನನ ಭಸ್ಮಮಾಡಿದನು ॥
ಮುನಿದ ಗಂಗಾಧರನ ಮುಖವ-। ನ್ನನಿಮಿಷರು ಭಯಗೊಂಡು ನೋಡದೆ।
ಪ್ರಣತಪಾಲನೆ ಕರುಣೆಯಿಂದೆಮ್ಮನ್ನು ಸಲುಹೆಂದು; ॥ ೪ ॥
ಹರನ ಪರಿಪರಿಯಿಂದ ಪೊಗಳು- । ತ್ತಿರಲು ಮಾರನ ಧರ್ಮಪತ್ನಿಯು ।
ಧರೆಯ ಮೇಲ್ಮೈಮರೆತು ವಜ್ರಾಘಾತವಾದಂತೆ ॥
ಉರುಳಿದಳು. ಕ್ಷಣಮಾತ್ರ ಗಂಡನ । ಮರಣದಾಸ್ಮೃತಿ ತಪ್ಪಿತದರಿಂ
ಪರಮ ದುಃಖದ ಮರವು ಬಿದ್ದಿತು. ದೈವದುಷಕೃತಿಯೇ! ॥ ೫ ॥

ಅಂತರಾಯವ ತಪಕೆ ಚರಿಸಿ- । ರ್ದಂಥಕಂತುವಿನಿಂತು ಪರಿಯ- ।
ಲ್ಲಂತಕನ ಪುರಕಟ್ಟಿಕೊಟ್ಟನು ತಾಪಸಾಗ್ರಣಿಯು ॥
ನಂತರ ಸ್ತ್ರೀ-ಸನ್ನಿ ಕರ್ಷವ- । ದೆಂತು ತಪ್ಪುವದೆಂದು ಮನದಲಿ ।
ತಚಿಂತಿಸಂಧ್ಯಾನ ಪಡೆದನು ಭೂತಪತಿಯಾಗ ॥ ೬ ॥
ಪೀತಭರ್ತೃಕೆಯಾದ ಮದನನ । ಪ್ರೀತಿಯರಸಿಯು ತಳೆದು ಮೂರ್ಛೆಯ ।
ಚೇತನೆಯ ಪಡೆದೆದ್ದಳಾಗಲೆ ದೈವಬಲದಿಂದ ॥
ಭೀತಿದಾಯಕ ಮುಂಡೆ ತನದಾ- । ಖ್ಯಾತ ದು:ಖವ ಭೋಗಿಸುವದ- ।
ಕ್ಕೇತಕಾಕೆಯ ಭಾಲದಲಿ ಲೇಖನವ ಬರೆದಿಹುದೋ! ॥ ೭ ॥
ಫುಲ್ಲಲೋಚನೆ ರತಿಯು ಕೂಡಲೆ । ಮೆಲ್ಲನೇ ಕಣ್ದೆಗೆದು ಸುತ್ತಲೆ ।
ನಿಲ್ಲದಲೆ ನೋಡಿದಳು ರಮಣನ ಮುಖವ ಕಾಣದಲೆ ॥
ಸೊಲ್ಲುತೆಗೆದಾಕ್ರೋಶ ಮಾಡುತ ।ನಲ್ಲನೇ ನೀನೆಲ್ಲಿ ಚರಿಸಿದೆ ।
ನಲ್ಲೆಯನ್ನುಳಿದೆಂದು ಕಾತರಗೊಂಡು ಕೂಗಿದಳು ॥ ೮ ॥
ಎದುರಿನೊಳು ಮದನಾರಿ- ನೇತ್ರದ । ಹದನವಾದುರಿಯಿಂದ ಸುಟ್ಟಿಹ ।
ಮದನನಾಕೃತಿ-ಭಸ್ಮವನು ಕಂಡವಳು ಕಳವಳಿಸಿ ॥
ಹೃದಯವನು ಕರದಿಂದ ಹೊಡೆಯುತ । ಹದಿಬದೆಯು ಮೇದಿನಿಗೆ ಬಿದ್ದಳು ।
ವದನದಿಂದೆಲೆ ಪ್ರಾಣದೊಡೆಯನೆ ಚದುರ ಮನ್ಮಥನೇ ॥ ೯ ॥
ಎಂದು ನಾಥನ ಪೆಸರುಗೊಂಡುರೆ । ಮಂದಭಾಗಿನಿ ಹೊರಳಿ ಗಡಗಡ ।
ಕಂದುಕಾಕೃತಿ-ಕುಚಗಳನು ಸಲೆಮಲಿನ ಮಾಡಿದಳು ॥
ಇಂದುಧರನೇಕಿಂದು ಮುನಿದನು । ಮಂದಿಯೊಳು ಮುಖವೆಂತು ತೋರಿಸ ।
ಲೆಂದು ಶೋಕವಮಾಡಿ ವನಪಾಷಾಣಕರಗಿಸಿದಳ್ ॥೧೦ ॥
ಅಲಲ! ಭುವನಗಳಲ್ಲಿ ನಾಥನೆ । ನಲಿದು ಪ್ರಿಯತಮರಾದ ಪುರುಷರ ।
ಚಲುವಿಕೆಗೆ ನಿನ್ನುಪಮೆ ಕೊಡುವರು ನಾರಿಯರು, ನೀನು ॥
ವಿಲಯಹೊಂದೀ ಸ್ಥಿತಿಯನೈದಿದೆ । ಕುಲಕಲಂಕಳು ನಾನು ಸಾಯದ- ।
ಲುಳಿದುಕೊಂಡಿಹೆ ಸ್ತ್ರೀಯ ಹೃದಯವು ಕಠಿಣವಜ್ರವದು ॥ ೧೧ ॥
ಜಲದ ಮಡುವಿನೊಳಿರ್ದ ಸುಂದರ । ನಲಿನಿಗಳು ಜಲಸೇತುವೊಡೆಯಲು ।
ಗಳಿಗೆಯೊಳು ಪ್ರಧ್ವಂಸ ಹೊಂದುವ ತೆರದಿ ನೀನಿಂದು ॥
ಉಳಿದು ನೇಹದ ಬಂಧವನ್ನುರೆ । ಗೆಳೆಯನೇ ಹೊರಟೆಲ್ಲಿ ಚರಿಸಿದೆ ।
ಮುಳುಗಿಸೆನ್ನನ್ನಿನಿಯನೇ ವೈಧವ್ಯ ಪಂಕದಲಿ ॥ ೧೨ ॥

ಎನಗೆ ನೀನೆಂದೆಂದು ವಿಪ್ರಿಯ । ಕನಸಿನಲಿ ಸಹ ನೆನಸದಾತನು ।
ನಿನಗೆ ನಾನೆಂದೆಂದು ಪ್ರತಿಕೂಲತೆಯ ಚರಿಸಿರದೆ ॥
ಇನಿಯನೇ ಬರಿದೇಕೆ ರತಿಯಲಿ । ಮುನಿಸು ತಾಳುವಿ? ಬೇಡಿಕೊಂಬೆನು ।
ಘನತೆಯಿಂ ದಯಮಾಡಿ ದರುಶನವನ್ನು ನೀಡೆಂದು ॥ ೧೩ ॥
ಸರಸ ಸಲ್ಲಾಪದಲಿ ನೀಂ ಮೈ- । ಮರೆತು ಪರವನಿತೆಯರ ನಾಮದೆ ।
ಸ್ಮರನೆ ನನ್ನನು ಕರೆದುದಕೆ ಪೂಸರದೆ ನಾಂ ನಿನ್ನ ॥
ಜರೆದು ಕರಗಳ ಕಟ್ಟಿದಂತಹ । ಸ್ಮರಸಿ ನನ್ನಪರಾಧವನ್ನುರೆ ।
ದರುಶನವ ಕುಡದಿರುವದುಚಿತವೆ? ಕ್ಷಮಿಸು ಕ್ಷಮಿಸೆನ್ನ ॥ ೧೪ ॥
ಹೃದಯದೀಶಳೆ ಎಂದು ನನ್ನ- । ನ್ನದಯನೇ ಪದಪದಕೆ ಬೋಧಿಸಿ ।
ಚದುರತನದಿಂ ಮೋಸಗೊಳಿಸಿದೆಯಬಲೆಯನು ಕಂಡು ॥
ಕುದಿದು ಮನದೊಳು ಮರಗುವೆನು ನಾಂ । ಮುದದಿ ಬಂದೆನ್ನನ್ನು ರಕ್ಷಿಸು ।
ಸದಮಲಾತ್ಮನೆ ನೀನೆ ನನ್ನಾಧಾರನಾಗಿರುವೆ ॥ ೧೫ ॥
ವರನೆ, ಪರಲೋಕಕ್ಕೆ ಮಮತೆಯ । ತೊರೆದು ಪೋದರೆ ನನ್ನದದರಲಿ ।
ಪರಮ ದುರ್ಧರ ಹಾನಿಯೆಂತಾಗುವದೊ ನಾನರಿಯೇ ॥
ಬರುವೆ ನಿನ್ನನುಸರಸಿ ನಾಥನೆ । ಸುರತ ಸೌಖ್ಯವು ನಿನ್ನ ವಶವಾ ।
ಗಿರುವದದರಿಂ ನರರು ವಂಚನೆಯನ್ನು ಪಟ್ಟಹರು ॥ ೧೬ ॥
ಪುರದ ವೀಥಿಗಳಲ್ಲಿ ನಿಶೆಯಲಿ । ಭರದ ಮೋಡಗಳಿಂದ ಕತ್ತಲೆ ।
ನಿರತಿಶಯವಾಗಿರಲು ಪ್ರೇಮಾಸಕ್ತ ಪೆಣ್ಗಳಿಗೆ ॥
ಅರರೆ! ಪ್ರಿಯ ತಮರಾದ ಪುರುಷರ । ಸರಸ ಕೇಲೀಗೃಹಕೆ ಮಾರ್ಗವ ।
ನರಸಿಯೊಯ್ಯುವರಾರು ಸುರತಾಧೀಶ ನೀನಿರದೆ ॥ ೧೭ ॥
ಮದನ-ಯೌವನ-ಮದದೆ ಕೂಡಿದ । ಸುದತಿಯರು ಮಧುಪಾನದಿಂದಲಿ ।
ಮದಿಸಿ ಪ್ರಿಯತಮರಾದ ಪುರುಷರ ವದನವನು ನೋಡಿ ॥
ತೊದಲು ನುಡಿಗಳನಾಡಿ ರಹದ- । ಲ್ಲೊದಗಿ ಕೇಲಿಕಲಾಪದಲಿ ಬಲು ।
ಮುದವನೀಯುವ ಬಗೆಯು ನೀನಿರದೆಂತು ಘಟಿಸುವದೋ? ॥ ೧೮ ॥
ನಿನ್ನ ನಿಧನದ ವಾರ್ತೆಯನು ತಾಂ । ಜೊನ್ನದೊಡಲನು ತಿಳಿದು ಮನದಲಿ ।
ಖಿನ್ನನಾಗಿಹನೇನು ಪೇಳಲಿ ಸ್ನೇಹಭಾವದಲಿ ॥
ಮುನ್ನಿನಂತುದಿಸೇನು ಫಲವೆಂ । ದೆನ್ನುವನು ಮೇಣ್ ಶುಕ್ಲಪಕ್ಷದೆ ।
ಬನ್ನ ಬಡುತಲೆ ಮೆಲ್ಲಮೆಲ್ಲನೆ ವೃದ್ಧಿಹೊಂದುವನು ॥ ೧೯ ॥
ಗಂಡು ಕೋಕಿಲ ಪಕ್ಷಿಗಳು ಬಹು । ದುಂಡು ಮಾಮರದರಳುಗಳನುರೆ ।

ಕಂಡು ಸಂತಸದಿಂದ ಮಧುರಾಲಾಪಗಳ ಮಾಡಿ ॥
ಗಂಡರಿಲ್ಲದ ನಾರಿಯರ ಮನ । ಖಂಡಿಸುವವವು ವ್ಯರ್ಥವಾಗಿಯೇ ।
ಚಂಡತಾಪವನೆಂತು ನಾರೀ ಜನರು ಸಹಿಸುವರೋ! ॥ ೨೦ ॥
ಅಮಮ! ಕಾಂತನೆ ಬಾರಿಬಾರಿಗೆ । ಭ್ರಮರಗಳ ಹೆದೆಬಿಗಿದು ಬಿಲ್ಲಿಗೆ ।
ಕಮಲಗಳ ಕೋಲ್ಪೂಡಿ ಜಯಿಸಿದೆ ಸಕಲ ವಿಶ್ವವನು ॥
ಪ್ರಮಥರೊಡೆಯನು ನಿನ್ನನೀಗಲೆ । ಯಮನಪಟ್ಟಣಕಟ್ಟಿ ಕೊಟ್ಟನು ।
ಮಮತೆಯಿಂದಲಿ ಮಧುಪಗಳು ರೋದನವ ಮಾಡುವವು ॥ ೨೧ ॥
ರಮಣನೇ ಮಗುಳೊಮ್ಮೆ ಜಗದೊಳು । ವಿಮಲದೇಹವನಾಂತು ಜನ್ಮಿಸಿ ।
ಕಮಲಮುಖದಿಂ ಹುಟ್ಟಪಂಡಿತೆಯಾದ ಕೋಕಿಲೆಗೆ ॥
ಪ್ರಮದೆಯರ ಕಡೆ ಪೋಗಿ ಮೋದದಿ । ಮಮತೆಯಿಂ ಮಮದೂತಿಕಾ ಯ್ಯವ ।
ಸಮನಿಸೆಂದಪ್ಪಣೆಯ ಮಾಡುವೆಯೆಂದು ಪ್ರಾರ್ಥಿಪೆನು ॥ ೨೨ ॥
ಪ್ರಾಣದೊಡಯನೆ ನಾನು ನಿನ್ನನು । ಮಾನವನು ಸಂತ್ಯಜಿಸಿ ರಹದಲಿ ।
ಕೇಣವಿಲ್ಲದೆ ಪ್ರಣತಿಪೂರ್ವಕ ಸುರತದಾನವನು ॥
ವಾಣಿಯಿಂದಲೆ ಬೇಡಿ ಪ್ರೇಮದೆ । ಪಾಣಿಯಿಂ ಬಿಗಿದಪ್ಪಿದಂತಹ ।
ಸ್ವಾನುಭವ-ಸಂಸ್ಮೃತಿಯು ನನ್ನನು ಪೀಡಿಸುತ್ತಿಹುದು ॥ ೨೩ ॥
ಕುಸುಮ-ಶರ ನೀನೆನ್ನ ಶಿರದ । ಲ್ಲಸನುಕುಶಲತೆಯಿಂದ ರಚಿಸಿದ ।
ಕುಸುಮ ನಿಚಯದ ಹೆಳಲು ಬಾಡದೆ ಸುಷುಮೆ ತಾಳಿರಲು ॥
ಭಸಿತಭೂಷಣನೇಕೆ ನಿನ್ನನು । ಕುಶಲನೇಕಸಗಳದನಯ್ಯೋ ।
ವಿಷಯಗಳು ಪುಸಿಯಾಗಿ ಪೋದವು ನಾಥನೀನಿರದೇ ॥ ೨೪ ॥
ಪರಮಚತುರತೆಯಿಂದ ದಕ್ಷಿಣ । ಚರಣಕಾಲಕ್ತಿಕೆಯ ಬಣ್ಣವ ।
ಬರೆದೆ ನನ್ನಯ ವಾಮಚರಣಕೆ ಬಣ್ಣವನು ಕೊಡದೇ ॥
ಹೊರಟು ಪರಲೋಕಕ್ಕೆ ಪೋಪರೆ? । ದುರುಳ ದೈವವು ನಿನ್ನನೊಯ್ದಿತೇ? ॥
ಹರಹರಾ! ನಾನೇನು ಮಾಡಲಿ ಮಾರನೀನಿರದೇ ? ॥ ೨೫ ॥
ಸುರರ ಪುರದಪ್ಸರೆಯರೆಲ್ಲರು । ಸರಸ ಶೃಂಗಾರವನು ತೋರಿಸಿ ।
ಸುರಥನಾಥನೆ ನಿನ್ನ ಮನಮೋಹಿಸುವ ಪೂರ್ವದಲಿ ॥
ಚರಿಸಿ ಸಲೆ ಸಹಗಮನ ವಿಧಿಯನು । ಬರುವೆ ನೀನಿರ್ದೆಡೆಗೆ ಮಾರನೆ ॥
ತ್ವರದೆ ನಿನ್ನರ್ಧಾಂಗಭಾಗಿನಿಯಾಗಿ ಮೆರೆಯುವೆನು ॥ ೨೬ ॥

ತೊರೆದು ಪ್ರಾಣಗಳನ್ನು ತಟ್ಟನೆ । ಬರುವೆ ನಿನ್ನನುಸರಿಸಿಯಾದೊಡೆ ॥
ನರರು ಪೂರನ ಪಿಂತೆ ನಿಂತಳು ರತಿಯು ತಾನೆಂದು ॥
ಜರಿವರಕಟಾನೇನು ಮಾಡಲಿ । ಸರಿಯೆ ನನಗರುಹದಲೆ ಪೋಪುದು ? ॥
ಬರಲಿ ಪ್ರಾರಬ್ಧಾನುಸಾರದಿ ಲೋಕನಿಂದೆಯುದು ॥ ೨೭ ॥
ಪೆರನೆ, ಲೋಕಾಂತರವ ನೈದಿದೆ । ಸರಸ ಸುಂದರ ಕಾಯ ನಿನ್ನದು ॥
ಬರಿದೆ ಭಸ್ಮವದಾಗಿಯಿರುತಿರಲೆಂತು ನಾನದಕೆ ॥
ಸ್ಮರನೆ ಸುಮನಾಭರಣವಿಡಿಸಲಿ? । ಜರದ ವಸ್ತ್ರಗಳನ್ನು ತೊಡಿಸಲಿ? ॥
ಸುರಸಮಾತುಗಳಿಂದ ನಿನ್ನನು ಹೇಗೆ ತೋಷಿಸಲಿ? ॥ ೨೮ ॥
ಒಡೆಯನೇ ಚಾಪವನು ನಿನ್ನಯ । ತೊಡೆಯಮೇಲ್ನೀನಿಟ್ಟು ಮೆಲ್ಲನೆ ।
ಬಿಡದೆ ಕೋಲ್ತುದಿ ತಿದ್ದಿ ನೋಡುತಪಾಂಗದೃಷ್ಟಿಯಲಿ ॥
ಗಡನೆ ಕಡುಪ್ರೇಮದಲಿ ಮಾಧವ- । ನೊಡನೆ ಸವಿಮಾತಾಡಿ ಸಂತಸ ॥
ಬಡುವದನು ನಾನೀಗಲಾದರು ನೆನೆಸುವೆನು ದೊರೆಯೇ ॥ ೨೯ ॥
ನಿನ್ನ ಜೀವದ ಗೆಳೆಯ ಮಾಧವ । ತನ್ನ ಕುಸುಮಗಳನ್ನು ಕೂಡಿಸಿ ॥
ನಿನ್ನ ಬಾಣಕೆ ಕೊಟ್ಟು ಸಾಹಸವನ್ನು ಮಾಡಿದಕೆ ॥
ಪನ್ನಗಾರಿಯು ವಾಹನನ ಸಖ । ತನ್ನ ಕಂಣಿನ ಜ್ವಾಲೆಯಿಂದಲಿ ।
ನಿನ್ನ ಮಿತ್ರನ ಸುಟ್ಟು ಬಿಟ್ಟಹನೇನು ನಾನರಿಯೇ ॥ ೩೦ ॥
ರತಿಯು ದುಃಖಾವೇಗದಿಂದಲೆ । ಪತಿಯ ಮಿತ್ರನ ನೆನೆಸಿಯೀಪರಿ ।
ಖತಿಯಗೊಂಡವಳಾಗಿ ಮಾತುಗಳನ್ನು ನುಡಿಯುತಿರೆ ॥
ಅತಿವಿಷಾದವ ತಾಳಿ ಬಾಹಾ- । ಹತನ ಪರಿಯಲಿನೊಂದು ಮಾಧವ ॥
ನತಿಶಯಾತುರದಿಂದ ಬಂದನು ಸುದತಿ ಯೆದುರಿನಲಿ ॥ ೩೧ ॥
ನೋಡಿ ಮಾಧವನನ್ನು ಕಾಂತೆಯು । ತಾಡಣವ ಮಾಡಿದಳು ಹೃದಯ ।
ಕ್ಕಾಕಿ ಪತಿಗುಣಗಳನು ದುಃಖವು ಪೆರ್ಚೆ ಕ್ಷಿತಿತಲಕೆ ॥
“ ಧಾಡನೇ ” ಬಿದ್ದಿದ್ದು ರೋದನ । ಮಾಡಿದಳು ಕಲ್ಕರಗುವಂತೆಯೆ ॥
ರೂಢಿಸುವದನಿವಾರ ಶೋಕವು ಸ್ವಜನರನು ಕಂಡು ॥ ೩೨ ॥
ನೋಡು ನೋಡು ವಸಂತನೇತವ । ಗಾಢ ಜೀವದ ಮಿತ್ರಮದನಗೆ ।
ಕೂಡಿಬಂದಿಹ ತೊಡರವನು ದುರ್ದೈವಬಲದಿಂದ ॥
ಮೋಡವಣ್ಣದ ಬೂದಿ ಗಾಳಿಗೆ । ಕಾಡಿನೊಳು ಪಸರಿಸಿತು ಕಣಶಃ ॥
ತೋಡಿಕೊಂಡರು ನನ್ನ ದುಃಖವನಾರು ಬಿಡಿಸುವರು ? ॥ ೩೩ ॥
ಸ್ಮರನೆ ಮಾಧವ-ಮಿತ್ರ ನಿನ್ನಯ । ದರುಶನವ ಹಾರೈಸಿ ಬಂದಿಹ ॥

ನಿರದೆಯಾತಗೆ ಭೆಟ್ಟಿಯನು ಕೊಟ್ಟೀಗ ಸಂತೈಸು ॥
ನರನ ರತಿ ಸ್ತ್ರೀಯಲ್ಲಿ ಸ್ಥಿರವಾ- । ಗಿರುವದಿಲ್ಲೆನ್ನುವದು ನಿಜವಾ- ।
ಗಿರುವದಾದೊಡೆ ಮಿತ್ರಜನರಲಿ ಸತ್ಯವಲ್ಲವಿದು ॥ ೩೪ ॥
ಮರಿಯದೆ ಮಾಧವನು ನಿನ್ನನು- । ಸರಿಸಿ ಸುರ-ದಾನವರ ವಿಜಯಕೆ ।
ಸರಸ ಸರಸಿಜ-ಶರಗಳನು ಪೂರೈಸಿ ನಿರುತದಲಿ ॥
ಪರಮ ದುರ್ಧರ ವೀರ ನೀನೆಂ । ದರುಹಿದನು ಜಗಕೆಲ್ಲ ಮಾರನೆ ।
ದರುಶನವನಿಚ್ಛಿಪನು ಸಲೆ ಪೂರೈಸು ಕಾಂಕ್ಷೆಯನು ॥ ೩೫ ॥
ಅದರೆ! ಪರಲೋಕಕ್ಕೆ ತೆರಳಿದ । ನರರು ಪುನರಪಿ ಮರಣಭೂಮಿಗೆ ।
ತೆರಳಿ ಬರುತಿಹರೆಂಬ ವಾರ್ತೆಯು ಕೇಳಿ ನಾನರಿಯೆ ॥
ಸುರತ ನಾಥನ ಪ್ರಾಣಗಳು ಗಡ । ಮರುತದಿಂದಾರಿರ್ದ ಸೊಡರಿನ ।
ತೆರದಿ ಲೋಕಾಂತರಕೆ ಪೋದವು. ಮಾರಸಖ ನೀನು, ॥ ೩೬ ॥
ಕನಸಿನೋಲ್ಪುಸಿಯಾದ ನನ್ನಯ । ತನುವಿನಾಶೆಯ ಬಿಟ್ಟು ತಟ್ಟನೆ ।
ಮನಸಿನೊಳು ತಳಮಳಿಸದಲೆ ಶಾಸ್ತ್ರೋಕ್ತವಿಧಿಯಿಂದ ॥
ಅನಲಗಾಹುತಿ ಕೊಟ್ಟು ದೇಹವ । ಕೊನೆಗೆ ಮುಟ್ಟಿಸಿ ಸ್ನೇಹಧರ್ಮದ ।
ಋಣವು ತೀರಿಸಿಕೊಂಡು ಜನರೊಳು ಧನ್ಯ ನೀನೆನಿಸು ॥ ೩೭ ॥
ವಿಧಿಯು ಮಾರನ ಕೊಂದು ನನ್ನನು । ವಧಿಸಿ ಬಿಟ್ಟಿಹನಾದ ಕಾರಣ ।
ಹೆದರದೆನ್ನನು ವಹ್ನಿಗಾಹುತಿಯನ್ನು ಕೊಟ್ಟೆನ್ನು ॥
ಮದನ ನಿದ್ದೆಡೆ ಕಳುಹಿ ಬೇಗನೆ । ಚದುರನೇ ಗಳಿಸೀಗೆ ಧರ್ಮದ ।
ಪದವಿಯನು; ಸಂಶ್ರಯವು ಕಡಿಯಲು ವಲ್ಲಿ ಬದುಕುವದೇ? ॥ ೩೮ ॥
ಅಂದವೀಯುವ ಚಪಲೆ ಮೇಘದ, । ಚಂದಿರನ ಸಂಗಡಲೆ ಚಂದ್ರಿಕೆ ।
ಚಂದವಾಗಿಹ ದೀಪಕಲಿಕೆಯ ಕೂಡ ತತ್ಪ್ರಭೆಯು ॥
ನಿಂದಿರದೆ ಲಯ ಹೊಂದುವಂತೆಯೆ । ಮಂದ ದೈವದ ಸತಿಯರಿನಿಯನ ।
ಹಿಂದೆ ಪೋಗುವದೊಂದೆ ಮಾರ್ಗವು ಸುಗಮವಾಗಿಹುದು. ॥ ೩೯ ॥
ಪತಿಯ ಮೃತವಿಗ್ರಹದ ಪಾವನ । ಚಿತೆಯ ಭಸ್ಮವ ನನ್ನ ದೇಹಕೆ ।
ಸತಿಯ ವ್ರತ ಪರಿಪಾಲಿಸುವದಕೆ ಚಂದದಿಂ ತೊಡೆದು ॥
ಚಿತೆಯಮೇಲ್ಮಲಗುವೆನು ಕೋಮಲ । ಲತೆಯ ಪಲ್ಲವ ತಲ್ಪದಂತೆಯೆ ।
ಚತುರನೇ ರತಿಯನ್ನು ಪತಿಲೋಕಕ್ಕೆ ಕಳುಹಿಪುದು ॥ ೪೦ ॥
ಕುಸುಮ ಬಾಣನ ಮತ್ತು ನನ್ನಯ । ಕುಸುಮದಾಸ್ತರಣವನು ಪ್ರೇಮದೆ ।

ಪಸರಿಸುವೆದಕೆ ನೀನು ಪಾರಂಪಾರ ನೆರವಾಪೆ ॥
ವಿಷಮುಸಮಯವಿದೆನಗೆ ಮಾಧವ, | ವ್ಯಸನವನು ಮನದಲ್ಲಿ ತಾಳದೆ |
ಯಶವ ಪಡಿಯುುದಾನು ಪ್ರಾರ್ಥಿಪೆ ನಿನಗೆ ಕರಮುಗಿದು ॥ ೪೧ ॥
ಬೆಂಕಿ ಹಚ್ಚಿದಮೇಲೆ ಸದಗೆಯ | ತೆಂಕಣದ ದಿಶೆಯಿಂದ ಗಾಳಿಯು |
ಸೊಂಕುವಂತೆಯೆ ಬೀಸಿ ಜ್ವಲನದ ಜ್ವಾಲೆಯನು ಬೆಳೆಸು ॥
ಅಂಕದಲ್ಲಾನಿರದೆ ಪೋದರೆ | ಶಂಕೆಯಿಲ್ಲದೆ ಪತಿಯ ಪ್ರಾಣವು |
ಸಂಕಟಾಕುಲವಾಗುವದು ಪರಲೋಕಬಾಂಧವನೇ ॥ ೪೨ ॥
ಇನಿತು ಮಾಡಿದ ಮೇಲೆ ಮಾಧವ | ಕನಿಕರದ ನಮ್ಮೀರ್ವರಿಗೆ ನೀರ್ |
ವಣಿಸಿ ಯೊಂದಂಜಲಿಯು ಪುಟದಿಂ ತೃಪ್ತಿಯನು ಪಡಿಸಿ ॥
ಇನಿಯನಿಗೆ ಬೇಕಾದ ಪೊಸಮಾ- | ವಿನ ಸುಕೋಮಲ ತಳಿರುಗಳನುರೆ |
ಘನತೆಯಿಂ ನಿರ್ವಪಿಸಿ ಪಾರತ್ರಿಕದ ವಿಧಿ ಮುಗಿಸು ॥ ೪೩ ॥
ಕಂತುವಿನ ಸತಿ ತನ್ನ ಜೀವಿತ | ದಂತವನು ನಿಶ್ಚಯದೆ ಮಾಡುವ |
ಳಂತೆ ಮನದೊಳು ತಿಳಿದು ತತ್ಕ್ಷಣದಲ್ಲಿ ಸುರವರನು ॥
ಅಂತರಿಕ್ಷದ ಮಾರ್ಗದಿಂದ- | ತ್ಯಂತ ಕನಿಕರದಿಂದ ನುಡಿದನು |
ಕಾಂತೆ ಮಾರನು ತಿರುಗಿ ಪುಟ್ಟುವನೀಶದಯದಿಂದ ॥ ೪೪ ॥
ಶಾಲಗಳು ಕಾಸಾರದಲಿ ಕೀ- | ಲಾಲವಟ್ಟಿಸಿ ಶ್ರಮಿಸುವಂತಹ |
ಕಾಲದಲಿ ಮಳೆ ಬಿದ್ದು ಜಲದ ಸಮೃದ್ಧಿಯಾಗುತಿರೆ ॥
ಬಾಳಿಯವುಗಳಿಗಾಗುವಂತಹ | ಕೇಳಿಪುಷ್ಕರವಾಣಿಯನು ರತಿ |
ತಾಳಿದಳು ಸಂತೋಷವನು ಬಹು ತನ್ನ ಮನಸಿನಲಿ ॥ ೪೫ ॥
ಮುಗುಳಿ ಗಗನದ ವಾಣಿನುಡಿಯಿತು | ಮುಗಳೆ ಮದನನ ಚೇಷ್ಟೆಯಿಂದಲೆ |
ಮ.ಗಳ ಮೇಲ್ಚತುರಾನನನ ಮನಸಾದರಿಂದವನು ॥
ನಗಜೆಯಿನಿಯನು ತನ್ನ ಕಣ್ಣಿನ | " ಧಗಧಗಿ " ಪ್ಪುರಿಯಿಂದ ಮಾರನ |
ಮಿಗಿಲು ದೇಹವ ಭಸ್ಮ ಮಾಡುವೆನೆಂದು ಶಪಿಸಿದನು ॥ ೪೬ ॥
ಸುರರ ಕಾರ್ಯಕ್ಕಾಗಿ ಗಿರಿಶನು | ಗಿರಿಯ ತನುಜಗೆ ಮೆಚ್ಚಿಯುವಳನು |
ವರಸಿ ಪರಮಾನಂದದಿಂ ಪರಿಹರಿಸಿ ಶಾಪವನು ॥
ಹರನು ತನ್ನ ಶರೀರದಿಂದಲೆ | ಸ್ಮರನ ಪುಟ್ಟಿಸಿ ಕಾಯುವನು ನೀಂ |
ಮರುಳತನದಲಿ ಸ್ವಾತ್ಮಘಾತವ ಮಾಡಬೇಡೆಂದು ॥ ೪೭ ॥
ರವಿಯು ಕಿರಣಗಳಿಂದ ಬತ್ತಿ | ರ್ದವನಿ ಮೇಲಿನ ಜಲವು ಪುನರಪಿ |

ಜವದೆ ಮೇಘೋದಕದ ರೂಪದೆ ತಿರುಗಿ ಬರುವಂತೆ ॥
ಶಿವನ ಕೃಪೆಯಿಂ ಮದನನಾದರು । ಯುವತಿಯೇ ಜನಿಹೊಂದಿ ಬರುವನು ।
ಭವಣಿ ಬಡದಿರು ನಿನ್ನ ನಾಥನು ನಿನಗೆ ಕೂಡುವನು ॥ ೪೮ ॥
ಇಂತು ಪರಿ ಗೀರ್ವಾಣವಾಣಿಯ । ಕಂತುವಿನ ಸತಿ ಕೇಳಿ ತನ್ನಯ ।
ಕಾಂತನೆಡೆಗಸುವಳಿದು ಪೋಗುವ ಹೇತುವನ್ನುಳಿದು ॥
ಚಿಂತಿಸುತ್ತಿರೆ ಮದನ-ಮಿತ್ರನ- । ಸಂತನಾಸಮಯಕ್ಕೆ ಬೋಧಿಸಿ ।
ಭ್ರಾಂತಿಯನು ತೆಗೆಬೊಗೆದು ರತಿಯನು ಶಾಂತಗೊಳಿಸಿದನು ॥ ೪೯ ॥
ಉಗುರಿನೋಲ್ ಸವಿಸವಿದು ಸೊರಗಿದ । ಹಗಲು ಮುಗಿಲೊಳು ಮೂಡಿದಂತಹ ।
ಚಿಗರಿದೇಶನು ರಾತ್ರಿಸಮಯವನೀಕ್ಷಿಸುವ ತೆರದಿ ॥
ಯುಗಕೆ ಸರಿಯಾದೊಂದು ದಿನವನು । ಸುಗುಣೆ ರತಿ ತಾಂ ಗಣಿಸುತಿರುವೆಳು ।
ಜಗದೊಳವತರಿಸೆಂದು ನಾಥನು ಬರುವನಿಂತೆಂದು ॥ ೫೦ ॥

ಪಾರ್ವತೀ ಪರಿಣಯವು.

(ಸರ್ಗ ೨)

ಇಂದುಧರ ಶಿವನಂದು ತನ್ನಯ । ಮುಂದೆ ಮದನನ ಭಸ್ಮಮಾಡಲು ।
ಕುಂದಿದಾನನೆಯಾಗಿ ಯತಿಶಯ ನೊಂದು ಮನದೊಳಗೆ ॥
ನಂದಿ ವಾಹನಿಗಂದವೀಯದ । ಸುಂದರತೆ ನಿಷ್ಫಲವದೇತ- ।
ಕ್ಕೆಂದು ಪಾರ್ವತಿ ತನ್ನರೂಪದ ನಿಂದೆಯನು ಮಾಡಿ; ॥ ೧ ॥
ಎಂತು ಹರನೇಕಾಂತ-ಪ್ರೇಮವು । ಕಾಂತನಾತನು ತನಗೆ ದೊರೆಯುವ ।
ನಂತೆ, ಮನದಲಿ ಚಿಂತಿಸುತೆ ನಿಶ್ಚಯದ ಬಲದಿಂದ ॥
ಸಂತತ ಶ್ರಮಮಾಡಿ ತಪದಿಂ- । ದಾಂತು ರೂಪವನವನ ಮೆಚ್ಚಿಸಿ ।
ಕಂತು ಮರ್ದನನನ್ನು ವರಿಸುವೆನೆಂದು ಸತಿನುಡಿಯೆ ॥ ೨ ॥
ತನಯೆ ಘನ ತಪವನ್ನು ಚರಿಸಲು । ವನಕೆ-ಪೋಗುವಳೆಂಬ ವಾರ್ತೆಯ ।
ಜನನಿಮೇನಿಕೆ ಕೇಳಿದಳು ಪರಿಜನರ ಮುಖದಿಂದ ॥
ಇನಿತು ಸಾಹಸದಿಂದ ಗಿರಿಜೆಯ । ಮನವ ತಿರುಹುವೆನೆಂದು ಯೋಚಿಸಿ ।
ತನುಜೆಯನು ಬಿಗಿದಪ್ಪಿ ಮುದ್ದಿಸಿ ಸ್ನೇಹಭರದಿಂದ ॥ ೩ ॥
ನುಡಿದಳೆಲೆ ಸುಕುಮಾರಿ ಘನವಾ- । ದಡವಿಯೊಳು ಮುನಿಯಂತೆ ನಡೆ
ಯುವ ।
ದೃಢತೆ ಪಡೆಯುವದುಂಟೆ ನಿನ್ನಿಂದಾಗುವದೆ ಮಗುವೆ? ॥
ಬಿಡು ಬಿಡೀ ಹವ್ಯಾಸ ಪಾರ್ವತಿ । ತಡೆಯುವದೆ ಮೃದುಪುಷ್ಪ ವಿಹಗದ ।
ಗಡತರಾದಾ ದೇಹಭಾರವ ಬಂದು ಬೀಳಲ್ಕೆ? ॥ ೪ ॥
ಎಷ್ಟು ಬೋಧನೆ ಮಾಡಿದರು ತ- । ನ್ನಿಷ್ಟವನು ಮನದಿಂದ ಗಿರಿಜೆಯು ।
ಸ್ಪಷ್ಟವಾಗಿಯೆ ತ್ಯಜಿಸಲಾರೆಂದುಸುರಿದಳು ತಾಯ್ಗೆ ॥
ಕಷ್ಟವಲ್ಲವೆ ರೋಧಿಪುದು ಸದ- । ಭೀಷ್ಟವನು? ಮತ್ತೆಳುಕಲಿನ ಜಲ ।
ರೋಷ್ಟವಾದರು ತಡೆದು ನಿಲ್ಲಿಪರಾರು ಜಗದೊಳಗೆ? ॥ ೫ ॥
ಕೆಲವು ಕಾಲವು ಕಳೆದು ಪೋಗಲು । ನಳಿನವದನೆಯು ತನ್ನ ಮಾನಸ- ।

ದೊಳಗಿನಿಂಗಿತವನ್ನು ತಿಳಿದವನಾದ ಜನಕನಿಗೆ ||
ಕೆಳದಿ ಮೊಗದಿಂ ಕೇಳಿದಳು ತಪ- | ಫಲವು ದೊರೆಯುವ ವರೆಗೆ ವನದೋ- |
ಳುಳಿದು ಕೊಳ್ಳುವದಕ್ಕೆ ಸ್ಥಾನವ ಕೊಟ್ಟು ಪೊರೆಯೆಂದು || ೬ ||
ಕನ್ಯೆಗೊಪ್ಪುತ್ತಿರುವ ನಿಶ್ಚಯ- | ವನ್ನು ಮನ್ನಿಸಿ ಪರಮ ಹರುಷದಿ |
ಮಾನ್ಯಗಿರಿವರನಿತ್ತನಪ್ಪಣೆಯನ್ನು ಪಾರ್ವತಿಗೆ ||
ತನ್ನ ನಾಮದೆ ಮುಂದೆ ಜನರೊಳು | ಧನ್ಯವೆನ್ನಿಸಿಕೊಂಡ ಶಿಖಿಮಯ |
ವನ್ಯ ಶಿಖರಕೆ ಗೌರಿಯಾಗಲೆ ಗಮನ ಮಾಡಿದಳು. || ೭ ||
ಸುರಭಿಯುತ ಚಂದನವನಳುಕಿಸಿ | ಕೊರಳಿನೊಳು ಸರಿದಾಡುವಂತಹ |
ಸರಸ ಮುತ್ತಿನಹಾರವನು ತೆಗೆದೊಗೆದು ತತ್ಕ್ಷಣಕೆ ||
ಅರುಣಕಾಲದ ಬಾಲರವಿಯಂ- | ತಿರುವ ವಲ್ಕಲವನ್ನು ಪಾರ್ವತಿ |
ಧರಿಸಿದಳು ಘನಘೋರ ತಪವನು ಚರಿಸ ಬೇಕಾಗಿ || ೮ ||
ಉದಕದೊಳು ಪುಟ್ಟಿರ್ದಕಮಲವು | ಮಧುಪವೃಂದಗಳಿಂದ ಕೂಡಿದ |
ವಿಧದಿ ಶೈವಲದಿಂದಲಾದರು ಶೋಭೆಗೊಡುವಂತೆ ||
ಸುದತಿ ಗಿರಿಜೆಯ ಜಟೆಯದಾದರು | ಮಧುರ ಕೇಶಕಲಾಪದಂತೆಯೆ |
ವದನವಿಧುವಿಗೆ ಪರಮ ಪರಮೆಯನಿತ್ತು ತೋರಿದುದು. || ೯ ||
ಮೂರುತಿರುಹಿನ ಮ್ಯೌಂಜಿ ಹುಲ್ಲಿನ | ಕೂರವಾದುಡುಧಾರವನು ಶ್ರೀ- |
ಗೌರಿ-ಮಾತೆಯು ಪ್ರಥಮದಲಿ ತಪ-ನಿಯಮಕನುಸರಿಸಿ ||
ಧೀರತನದಿಂ ತನ್ನಸೂಕ್ಷ್ಮ ಶ- | ರೀರ ಮಧ್ಯದೊಳಿರಿಸಿ ಧರ್ಮದ |
ದಾರಿಯನು ಸಾಮಾನ್ಯ ಜನರಿಗೆ ತೋರಿಬಿಟ್ಟಿಹಳು || ೧೦ ||
ಅಧರ-ರಂಜನವನ್ನು ಮಾಡುವ | ಚದುರ ಕೆಲಸವ ಬಿಡಿಸಿಕರವನು |
ಸುದತಿ ದರ್ಭಾಂಕುರಗಳಿದಾನೆಕ್ಕೆ ಹಚ್ಚಿದಳು; ||
ಹೃದಯ ಭಾಗಕೆ ತಟ್ಟಿ-ಪುಟಿಯುವ | ಮುದವನೀಯುವ ಕಂದುಕದೆ ಬಹು |
ವಿಧ ವಿಘಾಟವ ಬಿಡಿಸಿ ಯಾಕೆಯು ಹಚ್ಚಿದಳು ಜಪಕೆ || ೧೧ ||
ಉತ್ತಮೋತ್ತಮವಾದ ಮೆತ್ತನ | ಕುತ್ತನೇರು ಹಾಸಿಗೆಯು ವನಿತಾ- |
ಸತ್ತಮಳ ಮೈಗೊತ್ತಿ ದುಃಖವನಿತ್ತು ನೋಯಿಪುದು ||
ಕುತ್ತಿಗೆಯ ಕೆಳಗಿರಿಸಿಕರವನು | ವೃತ್ತಿಕೆಯ ಮೇಲ್ಮಲಗಿ ಯಾಕೆಯು |
ಚಿತ್ತನಿಗ್ರಹ ಮಾಡಿ ತಪವನು ಚರಿಪದಚ್ಚರವು! || ೧೨ ||

ಎರಳೆಯೆಲೆ ಯತಿ ತರಳ ದೃಷ್ಟಿಯು । ಪರಮ ಶೋಮಲಲತೆಗಳಲಿ ಘನ ।
ಸರಸವಾದ ವಿಲಾಸ-ವಿಭ್ರಮ-ವಿಮಲ-ಚೇಷ್ಟೆಗಳು ॥
ಗಿರಿಜೆತಪದಾರಂಭ ಕಾಲಕೆ | ಯೆರಡರಲ್ಲಿಂತೆರಡು ಗುಣಗಳ- |
ನಿರಿಸಿದಳು ನಿಕ್ಷೇಪರೂಪದಿ ತಿರುಗಿಕೊಳ್ಳಲೆನೆ ॥ ೧೩ ॥
ಅಲಸದಲೆ ಘನ ಕಲಶಕುಚದಿಂ । ಜಲವಸೇಚನ ಮಾಡಿ ತರುಗಳ ।
ಬೆಳಸಿದಳು ಬಲು ಪ್ರೇಮದಿಂದಲಪತ್ಯಭಾವದಲಿ ॥
ಕಲಕಿಯವುಗಳಲಿದ್ದ ನಲಿವನು । ವಿಲಯ ಹೊಂದಿಪೆನೆಂದರೂ ಗಡ |
ಸುಲಭವಲ್ಲಧು ಗುಹನಿಗಾದೊಡೆ ಪೇಳಲಿನ್ನೇನು ॥ ೧೪ ॥
ಎರಳೆಗಳ ಪರಿವಾರಗಳನುರೆ । ಕರೆದು ಕರದಿಂ ತೃಣದ ಬೀಜವ ।
ಹರುಷದಿಂದವುಗಳಿಗೆ ತಿನ್ನಿಸಿ ಭೀತಿಯನು ಹರಿಸಿ ॥
ಪರಮ ವಿಶ್ವಾಸವನು ಪುಟ್ಟಿಸಿ । ಗಿರಿಜೆಯವುಗಳ ಕಣ್ಗಳಿಗೆ ಸರಿ ।
ಬರುವವೇನೆಂದಳೆದು ಸಖಿ-ದೃಗ್ಗಳನು ನೋಡುವಳು. ॥ ೧೫ ॥
ಸ್ನಾನವನು ಮುಗಿಸೆದ್ದು ವಹ್ನಿಗೆ | ಬೋನದಾಹುತಿಯನ್ನು ಸಮಯಕೆ |
ಮೀನನಯನೆಯು ಕೊಟ್ಟು ಜಪವನು ಮಾಡಿ ಕುಳಿತವಳ ॥
ಕಾಣಲಾಗಲೆ ಮುನಿಗಳಂದಾ । ಸ್ಥಾನಕೈದುವರೆಲ್ಲರೂ ಬಹು- ।
ಮಾನ ಧರ್ಮಜ್ಯೇಷ್ಠರಲಿ ಸರಿಯಾಗಿ ತೋರುವದೆ? ॥ ೧೬ ॥
ಧರಣಿಧರಸುತೆ ಘೋರ ತಪವನು । ಚರಿಸುತಿರೆ ವನಪಶುಗಳಾಗಲೆ ।
ಮರೆತು ಬಿಟ್ಟವು ವೈರಭಾವವನತಿಥಿಗಳಿಗಂತು ॥
ತರುಗಳಾದರು ಕಲ್ಪಿತಾರ್ಥವ | ಪರಮ ಸಂತಸದಿಂದ ಕೊಡುವವು. ।
ಧರಣಿತಲ ಪರಿಶುದ್ಧವಾಯಿತು ಹೋಮಧೂಮದಲಿ ॥ ೧೭ ॥
ತಾನು ಸುಪ್ರತಿ ಚರಿಪ ತಪವಿದು | ಸ್ಥಾಣುವಿಜಯಕೆ ಸಾಲದೆಂದನು- ।
ಮಾನದಿಂ ನಿರ್ಧರಿಸಿ ದೇಹದ ಮೋಹವನು ತೊರೆದು ॥
ಮಾನಿನಿಯು ಮನಕಾಮವನು ಶಿವ- । ಧೇನು ದುಹಿಸುವವರೆಗೆ ಸಂತತ
ಧ್ಯಾನ ಮುಂತಾದಖಿಲ ಸಾಧನ ಮಾಡಲೆಳಸಿದಳು. ॥ ೧೮ ॥
ಚಂಡಿನಾಟದ ಶ್ರಮವಸಹಿಸದ | ಚಂಡಿಕೆಯು ನಿಶ್ಚಯದಿ ಮುನಿಗಳ- |
ಚಂಡ ತಪವನು ಮಂಡಿಸಿದಳತಿ ವೇಗದಿಂದಾಗ ॥
ಖಂಡಿತವೆ! ಮೃದುಕಠಿಣ ಪಾದಿ- । ತ್ತಂಡ-ಕನಕದ ಕಮಲದಿಂದೆನೆ? |
ಪಿಂಡವದು ನಿರ್ಮಾಣವಾಗಿಹುದೆಂದು ತೋರುವದು! ॥ ೧೯ ॥
ಹೊಂದು ಮುಂದಿಕ್ಕೆಲಕೆ ಧಗಧಗ- । ನೆಂದು ಸುಡುತಿಹ ಬೆಂಕಿಮೆಡೆಯಲಿ |

ಸುಂದರಾಂಗಿಯು ಬಿಸಿಲು-ಗಾಲದ ಬಳಿತ ಬಿಸಿಲಿನಲಿ ||
ಅಂದು ಲೋಕದ ಬಂಧುವಿನಕಡೆ | ಸ್ಪಂದ ವಿಲ್ಲದೆ ನೋಡುತಿರುವಳು. ||
ಹೊಂದುವೆನು ಮನಕಾಮವೆನ್ನುತ ಬಿಡದೆಯೆಂದೆಂದು ||೨೦||
ಬೆಂಕಿ ಬಿಸಿಲಿನ ತಾಪವನುದಿನ | ಸೋಂಕಿ ಗಿರಿಜೆಯ ಮುಖವು
ಬಾಡದೆ |
ಪಂಕಜಚ್ಛವಿ ತಾಳಿ ಥಳಥಳ ಹೊಳೆದು ಬೆಳಗುವದು. ||
ಕೊಂಕುಗಣ್ಣಿನ ಕೊನೆಯಭಾಗಕೆ | ತಾಂಕಿ ಬಿಸುಲಿನ ಜಳವು ಶ್ಯಾಮಿಕೆ- |
ಯಂಕಕಾಸ್ಪದ ಮೆಲ್ಲ ಮೆಲ್ಲನೆ ಮಾಡಿ ಕೊಟ್ಟಿಹುದು. || ೨೧ ||
ಉರು ತಪೋಧನರಾದ ಮುನಿಗಳ | ತೆರದಿ ನಿರಶನದಿಂದ ಗಿರಿಜೆಯು |
ಪರಮ ದಾರುಣವಾದ ತಪವನು ಚರಿಸಿ ಪಾರಣೆಯ ||
ಅರರೆ! ಯಾಚನೆಯನ್ನು ಮಾಡದೆ | ದೊರೆತ ಪಯದಿಂ ಮತ್ತೆ
ಚಂದ್ರನ |
ಸರಸ ಕಿರಣಗಳಿಂದ ತರುಗಳ ತೆರದಿ ಮಾಡುವಳು || ೨೨ ||
ಹೊಸ ಘನೇಂಧನದಿಂದಲುರಿಯುವ | ಪ್ರಸರ ಹೊಂದಿದ ಪಾವಕನಜಳ |
ಕಸಮ ತೇಜನ ಬಿಸಿಲುಗೂಡಲು ತಾಪ ಹೆಚ್ಚಿರಲು ||
ಬಿಸುಲುಗಾಲದ ಕೊನೆಗೆ ಜಡಿಮಳೆ | ಕಸುವಿನಿಂದಾಗಲ್ಕೆ ಗಿರಿಜಾ- |
ವಸುಧೆಗಳು ಹೊರಗೆಡುಹಿ ಬಿಟ್ಟವು ಬಾಷ್ಪಗಳನಾಗ || ೨೩ ||
ಕಣ್ಣಿನೆವೆಗಳ ಮೇಲೆ ಮುಂಚೆಗೆ | ಸಣ್ಣ ಹನಿಗಳು ಬಿದ್ದು ಕಿಂಚಿತ್ |
ತಣ್ಣಗಲ್ಲಿಯೆ ನಿಂತು ನಂತರದಲ್ಲಿ ಕೆಂದುಟಿಯ ||
ನುಣ್ಣಗಾದ ಪ್ರದೇಶದಲಿ ಮೇ- | ಉನ್ನತಸ್ತನದಿಂದಲುದರಕೆ |
ಮುನ್ನಿನಂತೆಯೆ ಜಾರಿನಾಭಿಸ್ಥಾನಕೈದಿದವು. || ೨೪ ||
ಬೀಸುತಿರೆ ಮಳೆಗಾಳಿಯದರೊಳು | ವಾಸಕಾಶ್ರಯಗೃಹವದಿಲ್ಲದೆ |
ಹಾಸುಗಲ್ಲಿನ ಮೇಲೆ ಮಳೆಯೊಳು ಮಲಗಿ ತಪವನ್ನು ||
ದೋಷರಹಿತೆಯು ಮಾಳ್ಪುದನು ತುಸು | ಬೇಸರಿಲ್ಲದೆ ಮಿಂಚುಗಣ್ಣಿಲೆ |
ಸೋಸಿ ನೋಡುತ ರಾತ್ರಿ-ದೇವಿಯು ಸಾಕ್ಷಿಯಾಗಿಹಳು. || ೨೫ ||
ಗೆಳೆಯನಗಲಿದ ಚಕ್ರವಾಕಿಯ | ಕಳಕಳ ಧ್ವನಿಕೇಳಿ ಮನದೊಳು |
ತಳೆದು ಕರುಣೆಯ, ತಾಳಲಾರದೆ ಬಳಲುತಿಹ ಸತಿಯು ||
ಚಳಿಯಕಾಲದ ರಾತ್ರಿಯೊಳು ಬಲು | ಚಳಿಯು ಹಿಮವನು ಹರಡು
ತಿರೆ ನಿ- |

ಕ್ಷಳದೆ ನೀರೊಳು ಮುಳುಗಿ ಘನ ತಪವನ್ನು ಚರಿಸುವಳು ॥ ೨೬ ॥
ಹಿಮದ ಪರಮೋತ್ಕರದಿಯಾಗಲೆ । ಕಮಲಗಳು ಕಮರಿದವು ಸರದಲಿ ।
ಕಮಲ ಸುರಭಿಯು ತಾಳ್ದ ಗಿರಿಜಾನನವು ನೀರೊಳಗೆ ॥
ಕಮಲ ದೋಷಾದಿಯಲಿ ತೋರಿತು । ಹಿಮದಿ ಕಂಪಿಸುತಿರುವ ಕೆಂದುಟಿ ।
ಯುಮವು ಸಮನಿಸಿ ಪದ್ಮಪತ್ರಕೆ ಶೋಭೆಯಿತ್ತಿಹುದು. ॥ ೨೭ ॥
ಮರದಿ ಯುದರಿದ ಪತ್ರಫಲಗಳು । ನಿರತಿಶಯ ತಪವನ್ನು ಚರಿಸುವ ।
ಪರಮ ತಾಪಸಿಗಳಿಗೆ ಪಾರಣೆಗಾಗಿ ಯಿರುತಿಹವು ॥
ಗಿರಿಜೆ ತರುಗಳ ಪತ್ರವಾದರು । ವರಿಸದಲೆ ನಿರಶನವೆ ವಹಿಸಲು ।
ನರರಪರ್ಣಾದೇವಿಯೆಂದನ್ವರ್ಥವೇಳುವರು. ॥ ೨೮ ॥
ತಮೆಗಳಲಿ ಮೇಣ್ಪಗಲಿನಲಿ ಸತಿ । ಕಮಲ ಕೋಮಲ ದೇಹವನು ಸಂ- ।
ಭ್ರಮದಿ ತಪವಾಚರಿಸಿ ಯೀಪರಿ ಶುಷ್ಕಮಾಡಿರಲು ॥
ಶಮದಮಾನ್ವಿತರಾದ ಮುನಿಗಳು । ಯುಮನ ಮಣಿಸಲು ಬಲ್ಲಋಷಿಗಳು ।
ಯುಮಿಗಳಾದರು ನೋಡಿ ಯೀತಪವನ್ನು ನಾಚಿದರು. ॥ ೨೯ ॥
ತಾರಕಾಸುರನಿಂದ ಸುರರಿಗೆ । ಬಾರಿ ಬಾರಿಗೆ ತ್ರಾಸವಾಗಲು ।
ಕೋರಿದರು ತಮಗೊಂದು ವರವನು ಸುರರು ವಿನಯದಲಿ ॥
ತೋರಿಸಲೆ ದೇವಾಧಿದೇವನೆ । ದಾರಸಂಗ್ರಹ ಮಾಡಿ ಕರುಣಾ- ।
ವಾರಿಧಿಯೆ ಪಡೆದೋರ್ವಸೇನಾ-ಪತಿಯ ನಮಗಾಗಿ. ॥ ೩೦ ॥
ಇಂತು ಜರಗಿದನಂತರ ಶ್ರೀ- । ಕಂತುಹರನಂತೋರ್ವವಾಕ್ಪಟು ।
ಕಾಂತಿಮಾನ್ಧೃತದಂಡಕೃಷ್ಣಾಜನನು ಪಾರುವನು; ॥
ನಿಂತು ಕೊಂಡನು ಗಿರಿಜೆಯೆದುರೋ- । ಳಂತ ವಿಲ್ಲದ ಪುಣ್ಯಪಾವನ- ।
ನಾಂತು ದೇಹವ ಬ್ರಹ್ಮಚರ್ಯವೆ ಮೂರ್ತಿಮಂತವೆನೆ. ॥ ೩೧ ॥
ಅತಿಥಿಯನು ಬಹುಮಾನ ಪೂರ್ವಕ । ಸತಿಯು ಸತ್ಕಾರವನು ಮಾಡುತ ।
ನುತಿಸಿದಳು ಸಾದರದಿ ಹಿತಕರ ವಚನದಿಂದವನ ॥
ಇತರಗುಣದಲಿ ಸಾಮ್ಯವಿದ್ದರು । ಸ್ಥಿತಿಗೆ ಮುಟ್ಟದ ಸಾಧುಪುರುಷರ ।
ಕೃತಿಯು ಗ್ಮೈರವದಲ್ಲಿಯೇ ಪರಿಣಾಮ ಹೊಂದುವದು ॥ ೩೨ ॥
ಗಿರಿಜೆಯಿತ್ತಾತಿಥ್ಯವನ್ನಾ- । ದರದಿ ಸ್ವೀಕರಿಸಿದನು ಕಿಂಚಿತ್ ।
ವಿಶಮವನು ಗೆಯ್ದಂತೆ ನಟಿಸಿದ ಮೇಲೆ ಮುಖ ನೋಡಿ ॥
ಸರಸಿಜಾಕ್ಷಿಯು ಕೂಡಲೊಯ್ಯನೆ । ಸರಸ ಮಾತುಗಳಾಡತೊಡ-

ಗಿದ

ಹರುಷದಿಂದಾ ಬ್ರಹ್ಮಚಾರಿಯು ಪರಮ ಸಾದರದಿ ॥ ೩೩ ॥
ತಪಕೆ ಹತ್ತುವ ಸಮಿಧೆಗಳು ಮೇಣ್ । ವಿಪುಲವಾಗಿರುತಿಹವೆ ಕುಶಗಳು? ।
ವಿಪಿನದೊಳ್ಸ್ನಾನಕ್ಕೆ ಸರಿಯಾದುದಕ ದೊರೆಯುವದೆ? ॥
ಸುಪಥೆ ಸಾಮರ್ಥ್ಯಾನು ಸಾರಪೆ । ಜಪತಪಂಗಳ ಚರಿಪೆಯಲ್ಲವೆ? ।
ವಪುವೆ ಧರ್ಮದ ಮುಖ್ಯಸಾಧನವಾಗಿ ತೋರುವದು. ॥ ೩೪ ॥
ಆವ ವೀರುಧಗಳಿಗೆ ನೀನೆ । ಭಾವಕಿಯೆ ನೀರುಣಿಸಿ ಬೆಳಿಸಿದೆ ।
ಜೀವದಿಂದವುಗಳನು ಪರಿಪರಿ ಜೋಕೆ ಮಾಡಿರುವೆ ॥
ದೇವಿಯವುಗಳ ತಳಿರುಗಳಛವಿ । ತಾವಕೀನಾಧರದ ರಕ್ತಿಮೆ ।
ತೀವಿ ತಾಳುತ್ತಿರುವವವು ನಿರ್ಬಾಧವಿರುತಿಹವೆ? ॥ ೩೫ ॥
ತರಳನಯನಗಳಿಂದ ನಿನ್ನಯ । ತರಳನೇತ್ರಕೆ ಸಾಮ್ಯ ಹೊಂದುವ ।
ಹರಿಣಗಳು ಸರಸರನೆ ಸೋಗಿಲೇ ಚಂದದಿಂ ಬಂದು ॥
ಭರದಿ ನಿನ್ನಯ ಕರದೊಳಿರುತಿಹ । ಸರಸದರ್ಭಾಂಕುರಗಳನು ತಾವ್ ।
ಹರಣಮಾಡಲು ನಿನ್ನ ಮನಸಿಗೆ ಹರುಷವಾಗುವದೆ? ॥ ೩೬ ॥
ಲೋಕದಲಿ ನುಡಿಯುವರು ರೂಪ ವಿ- । ವೇಕಕಾಶ್ರಯವೆಂದು ನಿಜವದು ।
ಭೀಕರಾದೀ ತಪದಿ ನಿನ್ನಯ ಶುದ್ಧಚರಿತವನು ॥
ಲೋಕದೊಳಗಿನ ಜನಕೆ ತೋರಿಸಿ । ಸಾಕು ಗುರುರೂಪಾಗಿ ಮೆರೆಯುವೆ ।
ಬೇಕು ನಿನ್ನಂಥವಳಿ ಮಗಳೆಂದೆಲ್ಲರುಸುರುವರು. ॥ ೩೭ ॥
ಕಮಲನಯನೆಯೆ ನೀನು ಚರಿಸಿ- । ರ್ದನುಮ ಪರಮೋದ್ದಾಮ ತಪದಿಂ-
ಹಿಮಗಿರಿಯು ಕುಲಸಹಿತ ಪಾವನನಾದ ಪರಿಯಲ್ಲಿ ॥
ಅಮರ ಲೋಕದಿ ಸಪ್ತಋಷಿಗಳ । ಸುಮದ ಬಲಿಯನು ಕೊಂಡು ಹರಿಯುವ ।
ವಿಮಲ ಭಾಗೀರಥಿಯ ಪುಣ್ಯೋದಕದಿ ಯಾಗುವನೆ? ॥ ೩೮ ॥
ಮೂರು ಪುರುಷಾರ್ಥಗಳ ಮಧ್ಯದಿ । ಮೇರು ಮಣಿಯಂತಿರುವ ಧರ್ಮವ ।
ನಾರಿಮಣಿ ಸಂಗ್ರಹಿಸಿ, ಕಾಮಾರ್ಥಗಳ ನೆರೆತೊರೆದು ॥
ಪಾರಮಾರ್ಥಕೆ ಮುಖ್ಯಸಾಧನ । ಸಾರಭೂತವಿದೆಂದು ಮನದಲಿ ।

ಸಾರಸಾಕ್ಷಿಯೆ ತಿಳುಹಿ ಕೊಟ್ಟಿಹೆ ಕಡಿದು ಸಂಶಯವ ॥ ೩೯ ॥
ಮಾನಿನಿಯೆ ನೀನೆನಗೆ ಮಾಡಿದ । ಮಾನಪೂಜಾದಿಗಳ ಮೂಲಕ ।
ಮಾನಿಸುವೆ ನಮ್ಮಲ್ಲಿ ದ್ವೈತದ ಭಾವಕಾಸ್ಪದವು ॥
ಎನುವುಳಿಯದ ಹಾಗೆ ತೋರ್ಪುದು । ಮಾನವಂತರು ಪೇಳುತಿರುವರು ॥
ನ್ಯೂನ ವಿಲ್ಲದೆ ಸ್ನೇಹಘಟಿಪುದು ಸಪ್ತಪದಿಯಿಂದ ॥ ೪೦ ॥
ಹುಟ್ಟಜಾತಿಸ್ವಭಾವದಿಂದಲೆ । ದಿಟ್ಟತನವೆನ್ನಲ್ಲಿಯಿರುವದು ।
ಬಿಟ್ಟು ಸಂಶಯವನ್ನು ಕೇಳುವ ಪ್ರಶ್ನಕುತ್ತರವ, ॥
ಸಿಟ್ಟು ತಾಳದೆ ಶಕ್ಯವಿದ್ದರೆ, । ಕೊಟ್ಟು, ಜಿಜ್ಞಾಸೆಯನು ತೀರಿಸು ।
ಕೆಟ್ಟು ಪೋಗುವದೇನು ಮಟ್ಟನು ಪೇಳಿದರೆ ಯೆನಗೆ? ॥ ೪೧ ॥
ಮೂರು ಲೋಕದ ಚಲುವಿಕೆಯು ಘನ । ಸಾರವೇನೀನಾಗಿ ತೋರುವೆ, ॥
ಪಾರಮೇಷ್ಠಿ ಪ್ರಥಮಕುಲದಲಿ ಜನ್ಮ ಹೊಂದಿರುವೆ ॥
ಪಾರವಿಲ್ಲದ ಭೂತಿಯನು ಮೇಣ್ । ಚಾರು ತಾರುಣ್ಯವನು ಪಡೆದಿಹೆ ।
ಘೋರತಪದಿಂದಧಿಕವೇನೀನಿದಕೆಗಳಿಸುವದು? ॥ ೪೨ ॥
ಧೀರನಾರೀಜನರಲೀಪರಿ । ಘೋರತಪವಾಚರಿಪ ಬುದ್ಧಿಯು ।
ಸೇರುವದುಗೃಹದಲ್ಲಿ ದುಃಸಹ ತಾಪಪೊದಗಿದರೆ ॥
ನೀರೆನಿನ್ನಲ್ಲಿಂಥ ತಾಪಕೆ । ಕಾರಣವು ಕೆಲಮಟ್ಟಿಗಾದರು ।
ತೋರಲೊಲ್ಲದು ಮನಸಿನೊಳು ಬಹುತಿಳಿದು ನೋಡಿದರೂ ॥ ೪೩ ॥
ಸುಂದರಾದೀ ದೇಹಪರಿಭವ । ಹೊಂದುವದೆಯಾರಿಂದಲಾದರು ।
ತಂದೆಮನೆಯೊಳು ಕುಂದಕೊರತೆಗಳೆಂದು ತಟ್ಟುವವೆ?॥
ಮಂದಿ ಮುಟ್ಟುವ ಶಂಕೆಯಾದರು । ಸಂಧಿಸದು ನಿನ್ನಲ್ಲಿ ಮಾನಿನಿ ।
ದಂಡಶೂಕದ ಮಣಿಗೆ ಕರವನ್ನಾರು ಚಾಚುವರು? ॥೪೪ ॥
ತರುಣಿಯೊಡಿವೆಗಳನ್ನು ವರ್ಜಿಸಿ । ಯರುಣವರ್ಣದ ವಲ್ಕಲಾಗಳ ।
ಧರಿಸಿ ಜರಠೆಯ ತೆರದಿ ಚರಿಸುವ ದೇತಕೀಪರಿಯು? ॥
ಅರಹುರಜನೀಮುಖಕೆ ಚಂದ್ರನು । ಬರಲುಮುಗಿಲೊಳು ರಾತ್ರಿದೇವಿ
ಯು ।

ಮೆರಿಸುವಳೆ ಬಿಟ್ಟವನ ಗರುಡಾಗ್ರಜನ ಮೋದದಲಿ? ॥ ೪೫ ॥
ಗಿರಿಜೆ ಹಿಮಗಿರಿವರನು ಸುರರಿಗೆ । ಪರಮ ವಾಸಸ್ಥಾನವಾಗಿರೆ ।
ಬರಿದೆ ದಿವವನು ದೊರಿಕಿಸುವದಕ್ಕಾಗಿ ಶ್ರಮಬೇಕೆ? ॥
ವರನ ವರಿಸುವದಕ್ಕೆ ತಪವನು । ಚರಿಸುತಿರ್ದರೆ ಸಾಕು ಸಾಯಸ- ।
ಪರಿಸುತಿರುವದೆ ರತ್ನವದು ಜನರನ್ನು ತಾನಾಗಿ? ॥ ೪೬ ॥
ನೀನು ಬಿಸುಸುಯ್ಯುವದರಿಂದಲೆ । ತಾನೆ ನಿನ್ನಿಂಗಿತವು ತಿಳಿಯಿತು ।
ಮಾನಿನಿಯೆ ಮತ್ತೊಂದು ಸಂಶಯ ಮನದೊಳುಳಿದಿಹುದು. ॥
ಧೇನಿಸಿದರೀ ಜಗದೊಳೆಲ್ಲಿಯು । ಕಾಣೆ ನಿನಗನುರೂಪ ಪುರುಷನ ।
ನೀನೆ ಪ್ರಾರ್ಥಿಸಲೊಲ್ಲೆ ನಿನ್ನವರಾರು ನಾನರಿಯೆ ॥ ೪೭ ॥
ಸರಸಿಜಾಕ್ಷಿಯೆ ನೀನು ವರಿಸಿದ । ಪುರುಷನರಸಿಕ ಕಠಿಣ ಹೃದಯನು. ।
ಕರುಣೆಯಿಲ್ಲದೆ ನಿನ್ನ ಶ್ರಮವನ್ನೆಂತುಪೇಕ್ಷಿಸನೋ!! ॥
ಆರಕೆ ಕರ್ಣೋತ್ಪಲಗಳಿಲ್ಲದ । ಬರೆಯ ಕಿವಿಗಳ ಮೇಲೆ ಜಡೆಗಳು ।
ಹರಡಿಜೋತಾಡುವದು ಸ್ಥಿರವಾಗೆಂತು ನೋಡುವನೋ! ॥ ೪೮ ॥
ಘೋರತಪದಾಚರಣದಿಂದ ಶ- । ರೀರ ಕೃಶವಾಗಿರುವದಲ್ಲದೆ ।
ಕ್ರೂರ ಬಿಸುಲಿನಜಳಕೆ ವಸ್ತ್ರಗಳಿಡುವ ಸ್ಥಳಸುಟ್ಟು ॥
ಕಾರಗೆರೆಗಳು ಕಾಣುತಿರುವವು । ನೀರೆ ಪಗಲಿನ ಚಂದ್ರನಂತೆಯೆ ।
ತೋರುತಿಹೆ ನಿನ್ನನ್ನು ದ್ರವಿಸದೆ ನೋಡುವವರಾರು? ॥ ೪೯ ॥
ನಿನ್ನ ಪ್ರಿಯತಮನಾದ ಪುರುಷನು । ತನ್ನ ರೂಪದ ಗರ್ವದಿಂದಲೆ ।
ಸನ್ನುತಾಂಗಿಯೆ ತಾನೆ ತನ್ನನು ವಂಚಿಸಿರುತಿಹನು. ॥
ನಿನ್ನ ಮುಖಚಂದ್ರಮನ ಜೊನ್ನದೆ । ಕಣ್ಣುಗಳ ಪಾರಣೆಯ ಮಾಡದ- ।
ಗನ್ನ ಜಡಮತಿಯನ್ನು ನಾನಿನ್ನೆಂತು ಬಣ್ಣಿಪೆನು. ॥ ೫೦ ॥
ಎಷ್ಟುದಿನಪರ್ಯಂತದುರ್ಧರ । ಕಷ್ಟಬಡುತಿಹೆ, ಬಿಟ್ಟುಬಿಡು ನಿ- ।
ನ್ನಿಷ್ಟವನು ಸಾಧಿಸಲು ನನ್ನಯ ಪುಣ್ಯದರ್ಧವನು ॥
ತುಷ್ಟಿಯಿಂದಲೆ ಕೊಟ್ಟುಬಿಡುವೆನು । ಪ್ರೇಷ್ಟಪುರುಷನ ಪೆಸರನೀನಿ- ।
ರ್ದಿಷ್ಟ ಮಾಡುವೆಯೆಂದು ಪರಮಾದರದಿ ಕೇಳುವೆನು. ॥ ೫೧ ॥

ಇಂತುಪರಿ ಕೌತುಕದಿ ವರ್ಣಿಯು । ಕಾಂತೆಗಾಕೆಯ ಪ್ರಿಯನ ಪೆಸರವ ।
ಸಂತಸದೆ ಪೇಳೆಂದು ಕೇಳಲು ನುಡಿಯದಲೆ ಸತಿಯು ॥
ಪಿಂತೆ ನಿಂತಿರುವಂಥ ತನ್ನೇ- । ಕಾಂತ ಮಾನಸಳಾದ ಸಖಿಯು- ।
ನ್ನಂತರಂಗದ ಗುಟ್ಟವರುಹಲು ನೋಡಿದಳು ತಿರುಗಿ. ॥ ೫೨ ॥
ಮಳೆಗೆಗಾಳಿಗೆ ಬಿಸುಲಿಗಂಜದೆ । ನಳಿನಸಮಕೋಮಲಶರೀರವ ।
ಬಲಿತ ತಪಸಾಧನಕೆ ಸತ್ತಿಗೆಯಂತೆ ಮಾಡಿರುವ ॥
ಗೆಳತಿಯಂತರವನ್ನು ವರ್ಣಿಯೆ । ತಿಳಿದುಕೊಳ್ಳಲು ಬಯಸುತಿರ್ದರೆ ।
ತಿಳಿಸುವೆನು ಕೇಳದನೆ ನೀನೆಂದುಸುರಿದಳು ಸಖಿಯು ॥ ೫೩ ॥
ರೂಪಗರ್ವಿತನಾದ ಕುಸುಮದ । ಚಾಪನನು ಸಂಹರಿಸಿದಂಥ ವಿ- ।
ರೂಪನಯನನ ಕಾಂತೆಯಾಗುವೆನೆಂದು ನಿಶ್ಚಯಿಸಿ ॥
ಭೂಪ ದಿಕ್ಪಾಲಕರ ಮಹತಿಗೆ । ಪಾಪ! ಮನವನ್ನೀಸದಲೆ ಸಂ- ।
ತಾಪಕೊಳಗಾಗಿರುವಳೀಸತಿ ತಪವನಾಚರಿಸಿ. ॥ ೫೪ ॥
ಕುಸುಮಚಾಪನು ನಿಶಿತಬಾಣದೆ । ಭಸಿತಭೂಷಣನನ್ನು ಹೊಡೆಯಲು ।
ಶ್ವಸನದಿಂದಲೆ ತ್ರಿಪುರಹರನವನನ್ನು ಸಂಹರಿಸೆ ॥
ಎಸೆದ ಬಾಣವು ಶಿವಗೆ ತಾಕದೆ । ಶಶಿಮುಖಿಸುಹೃದಯಕ್ಕೆ ಯತಿಶಯ ।
ಕಸುವಿನಿಂದಲೆ ತಗಲಿಯವಳಿಗೆ ವ್ಯಸನ ಗೊಳಿಸಿಹುದು. ॥ ೫೫ ॥
ಆಗಿನಿಂದೀವರೆಗೆ ನಗಜೆಯು । ನಾಗಭೂಷಣನನ್ನೆ ನೆನೆಯುತೆ ।
ಭೋಗಪೂಗಗಳನ್ನು ವರ್ಜಿಸಿ ಸೋಗುಸೊಬಗುಗಳ ॥
ತ್ಯಾಗವನು ಮಾಡಿರುವಳಲ್ಲದೆ । ಪೂಗಣೆಯನತಿ ತಾಪಸಹಿಸದೆ ।
ಹೀಗೆ ಮನೆಯನು ಬಿಟ್ಟು ವನದೊಳು ತಪವ ಚರಿಸುವಳು. ॥ ೫೬ ॥
ಮದನತಾಪಕೆನೊಂದು ಹದಿಬದೆ । ಹದನಗಾಣದೆ ಮದನನರಿಯನು ।
ಪದದ ಕಿಂಕರಿಯನ್ನು ಮುದದಿಂ ಸಲಹು ಸಲುಹೆಂದು ॥
ಗದಗದ ಸ್ವರದಿಂದ ಭಾವದೆ । ವಿಧವಿಧೋಕ್ತಿಗಳಿಂದ ಪಾಡುತೆ ।
ಚದುರ ಕಿನ್ನರಕನ್ಯೆಗಳ ಕಣ್ಣೀರು ತೆಗೆಸುವಳು. ॥ ೫೭ ॥
ನಿಶೆಯ ಮಧ್ಯಮದಿಯನ್ನು ಗೌರಿಯು । ವ್ಯಸನದಲಿಕಳೆದುಳಿದಕಾಲ- ।
ಕ್ಕುಸುರು ಗೆಯ್ಯುತ ಧರೆಯ ಮೇಲ್ಮಲಗೆದ್ದು ಚಡಪಡಿಸಿ ॥
ಪಸರಿಸಿದಕರವೆತ್ತಿ ಹಿಡಿಯುತೆ । ಶಶಿಧರನೆ ನೀನೆಲ್ಲಿ ಪೋಗುವೆ ।
ಯುಸುರೆಕೊಡುತಿಹೆನೆಂದು ಬಡಬಡಿಸೆಚ್ಚರಾಗುವಳು. ॥ ೫೮ ॥

ಬೊಂಬೆಯನು ಬರೆದಿಟ್ಟು ತಾಂ ಜಗ- | ದಂಬೆರಹದಲಿ ನುಡಿಯುತಿರು
ವಳು |
ಶಂಭುಸರ್ವಾತ್ಮಕನು ನೀನೆಂದುಸುರುವರು ಬುಧರು ||
ಶಂಬರಾರಿಯು ನನಗೆ ಪರಿಪರಿ- | ಯಂಬುಗಳನೆಸೆದೆಸೆದು ಹೊಡೆಯುವ
ನೆಂಬುವದು ನೀನೇಕೆ ಮರೆತಿರುವೆಂದು ಮರುಗುವಳು. || ೫೯ ||
ಪ್ರಾಣದೊಡೆಯನ ಪ್ರಾಪ್ತಿಯಾಗಲು | ಕಾಣದನ್ಯೋಪಾಯವನು ಸ್ವ |
ಪ್ರಾಣದಾಶೆಯ ತೊರೆದು ನಿಶ್ಚಯದಿಂದ ತಪವನ್ನು ||
ತಾನು ಮಾಡುವೆನೆಂದು ಯೋಚಿಸಿ | ಮಾನಿನಿಯು ಪಿತ್ರಾಜ್ಞೆಯಿಂದಲೆ |
ಕಾನನವ ನಮ್ಮೊಡನೆ ಸೇರಿಹಳೇನು ಪೇಳುವೆನು.|| ೬೦ ||
ಗಿರಿಜೆ ತಪದಾರಂಭಕಾಲಕೆ | ಮರುಕಿನಿಂದೂರಿರ್ದತರುಗಳು |
ಭರದಿ ಪೇರ್ಮರಗಳಿಗೆ ಸರಿಯಾಗೀಗ ಫಲಗಳನು ||
ಧರಿಸಿ ಮೆರೆಯುತ್ತಿರಲು ಸಖಿಯುಳ | ಹರನ ಸಂದರ್ಶನದ ಲಾಭದ |
ಕುರುಹವಾದರು ತೋರದಿರೆ ಫಲದಾಶೆಯೆತ್ತಣದು? || ೬೧ ||
ಹರಗಿ ಹಸನಾದೆರೆಯ ಧರಣಿಯು | ಬಿರಿದು ಮಳೆಯನು ಬಯಿಸಿ ಯಿಂದ್ರ
ನ |
ಕರುಣೆಯಯಾಚಿಸುವಂತೆ ದಾರುಣತಪವನಾಚರಿಸಿ ||
ಇರುವ ಗಿರಿವರಕನ್ಯೆಯನು ಶಶಿ- | ಧರನು ಪರಮೋದಾರತನದಲಿ |
ಮರುಕಿನಿಂ ಪರಿಪಾಲಿಸುವನೆಂದಾವು ಕೋರುವೆವು. || ೬೨ ||
ಅಂತರಂಗವನರಿತ ಸಖಿಯಿಂ- | ದಿಂತು ವೃತ್ತಾಂತವನು ಕೇಳಿದ |
ನಂತರದಿ ಸಂತಸದ ಭಾವವನೇನು ತೋರಿಸದೆ ||
ಶಾಂತತನದಲಿ ಮಾಣವಕನ- | ತ್ಯಂತ ನಿಸ್ಪೃಹತೆಯಲಿ ನುಡಿದನು |
ಕಾಂತೆ ಕೆಳದಿಯು ಪೇಳಿದುದು ನಿಜವಾದ ಸಂಗತಿಯೊ? || ೬೩ ||
ಗಿರಿಜೆಯೀಪರಿ ಕೇಳಿದಾಗಲೆ | ಸ್ಮರಣಿಯನು ಕರದಿಂದಲೊಂದೆಡೆ |
ಸರಿಸಿ ಬೆರಳುಗಳನ್ನು ಮುಕುಲಿಸಿ ಧರಣಿಯನು ನೋಡಿ ||
ಪರಮಲಜ್ಜಿತೆಯಾದರೂತಾ- | ನಿರದೆ ಧೈರ್ಯವತಾಳಿ ಮೆಲ್ಲನೆ |
ಸರಸ ವಚನಗಳಿಂದ ಬಟುವಿಗೆ ಕೊಟ್ಟಳುತ್ತರವ. || ೬೪ ||

ವೇದಮೂರ್ತಿಯೆ ನೀನು ಕೇಳಿದ । ವಾದವದು ನಿಜವಾದುದೇಸರಿ ।
ಬಾಧೆಯಿಲ್ಲದ ಶ್ರೇಷ್ಠಪದವಾಕ್ರಮಿಸಬೇಕೆಂದು ॥
ಸಾಧಿಸುವೆನೀತಪವನದಕಿದು | ಸಾಧನವು ಸರಿಯುಲ್ಲವಾದರು ।
ರೋಧ ಮಾಡುವರಾರು ಮನಸಿನ ವಿಷಯವನು ತಡೆದು. ॥ ೬೫ ॥
ಜಾಣೆಗಿರಿಜೆಯ ವಾಣಿಯನುವರ-। ಮಾಣವಕನಾಲೈಸಿ ನುಡಿದನು |
ನೀನು ಫಣಿಭೂಷಣನ ಮಹಿಮೆಯ ಕಂಡುಕಂಡವನ ॥
ಏನುಕಾರಣ ಮಾನಮಾಡುವೆ । ಹೀನಕುತ್ಸಿತಚರಿತನಾದಾ |
ಸ್ಥಾಣು ನಿನಗನುರೂಪವರನೆಂದಾರು ತಿಳಿಯುವರು? ॥ ೬೬ ॥
ಹಾವುಕಡಗಗಳನ್ನು ಧರಿಸಿದ | ದೇವನನು ನೀ ವರಿಸಿ ಭಾವಕಿ ।
ಯಾವಪರಿಯಿಂದವನ ಪಾಣಿಗ್ರಹಣವನು ಮಾಡಿ ॥
ಜೀವಿಸುವೆ? ನಿನಗಾರು ಸಮಯಕೆ । ಕಾವುವರು ಪಾರ್ವತಿಯೆ ತಿಳಿ-
ಯದು ।
ಸಾವಕಾಶದಿ ವಿಷವ ಸವಿದಿನ್ನಾರು ಸುಖಿಸುವರು? ॥ ೬೭ ॥
ನೀನೆ ಯೋಚಿಸಿ ನೋಡು ಮನದೋ-। ಳಾನೆಹಸಿದೊಗಲೆತ್ತ ನಿನ್ನಯ ।
ಜೋನಸ್ಯೊಕಸದಂಥ ನಿರ್ಮಲ ವಸ್ತ್ರವೆತ್ತಣದು? ॥
ಪಾಣಿಪೀಡನಕಾಲಕಿವುಗಳ । ಮಾನಿನಿಯೆ ಗಂಟೆಂತು ರಚಿಸುವ- |
ರೇನು ಕತ್ತಲೆ ಬೆಳಕುಗಳ ಸಂಗಮವು ಕಲಿಯುವದೆ? ॥ ೬೮ ॥
ಅರಳುಗಳ ಸರಿಯಾಗಿ ಪರೆಪಿದ । ಧರೆಯಮೇಲ್ಗೃಹದಲ್ಲಿ ಚರಿಸುವ ।
ಸರಸವಾದಾಲತಿಗೆಬಣ್ಣದೆ ಶೋಭಿಸುತ್ತಿರುವ ॥
ಚರಣಗಳು ಹರನಿರುವ-ಮಂಗಳ । ಪರಮಭೀಕರ ನೆಲದ ಮೇಲ್ನೀಂ ।
ಗಿರಿಜೆ ತಿರುಗುವಿಯೆಂತು ಪರಮೇಶ್ವರನೆ ತಾಂಬಲ್ಲ. ॥ ೬೯ ॥
ಮೂರು ಕಣ್ಣುಳ್ಳಂಥ ಪುರುಷಗೆ । ಯಾರು ಸುಂದರನೆಂಬು ತಿಳವರು? ॥
ಚಾರಸಾಕ್ಷಿಯೆ ಪ್ರೀತಿಸುವೆ ನೀನೆಂತು ಶಂಕರನ? ॥
ನೀರೆಹರನಾಲಿಂಗಿಸಲು ಬಲು । ತೋರಕುಚಗಳ ಮಧ್ಯದಲಿಗಡ ।
ಸೇರುವದು ಸುಡುಬಾಡ ಬೂದಿಯು ಸಹಿಸುವೆಂತದನು? ॥ ೭೦ ॥
ಮೆತ್ತೆ ಮದಿಮಗಳಾದ ನಿನ್ನನು । ದುತ್ತಹಸ್ತಿಯಮೇಲೆ ಮೆರೆಸದೆ ।

ಸೋತ್ರವೊಂಗಿಯೆ ಮುದುಕನಂದಿಯ ಮೇಲೆ ಪ್ರಥಮದಲಿ ||
ಹತ್ತಿಸೊಯ್ಯುವದನ್ನು ಕಂಡರೆ । ಸುತ್ತುಮುತ್ತಲ್ಲೆಲ್ಲ ಕಡೆಯಲಿ ।
ಚಿತ್ತದಿಂ ಕೂಡಿರ್ದಜನತೆಯು ಹಾಸ್ಯಮಾಡುವದು. || ೭೧ ||
ಭಾಲನಯನನಗೆ ಮೆಚ್ಚಿ ಮುಂಚೆಗೆ । ಬಾಲಚಂದ್ರನು ಮೋಸ ಹೋದನು. ।
ಸಾಲದಕೆ ನೀನಾದರೂ ಶ್ರೀಕಂಠನಾಶ್ರಯಿಸಿ ||
ಬಾಲೆ ನಯನಾಲ್ಹಾದಕಾರಿಣಿ । ಸೋಲುತಿರುವೆಂದೆನಗೆ ತೋರ್ಪುದು. ।
ಕಾಲಕನುಗುಣವಾಗಿ ವಿಲಯದ ಬುದ್ಧಿಯಾಗುವುದು. || ೭೨ ||
ಹರನ ಜನಿಯೆಲ್ಲಿರುವದೊ? ಮೇಣ್ । ಹರಕಕೋವಣ ಸಿಗದಲಾತನು ।
ತಿರುಕವೃತ್ತಿಯ ಮೇಲೆ ಚರಿತಾರ್ಥವನು ನಡೆಸುವನು, ||
ವರನಲಿರತಕ್ಕಂಥ ಗುಣವೊಂ- । ದಿರದೆ ನೀನೆಂತವಗೆ ಮಾನಿನಿ ।
ಮರುಳುಗೊಂಡಿಹೆ ಯೆಂದು ಮಹದಾಶ್ಚರ್ಯವಾಗಿಹುದು! || ೭೩ ||
ಎಲ್ಲಿ ಬಹು ಪುಣ್ಯಾತ್ಮಕಳು ನೀ- । ನೆಲ್ಲಿ ಯೀ ವಿಧವಾದಶೂಲಿಯು? ।
ಸಲ್ಲನಿವನಿನಗಂತು ಮಾನಿನಿ ಬಿಟ್ಟುಬಿಡು ಶಿವನ. ||
ಬಲ್ಲವರು ಯಜ್ಞಾಂಗಪಶುವನು । ಕೊಲ್ಲುವರೆ ವಿಧಿಯಿಂದ ಶೂಲದ ।
ಕಲ್ಲುಗಂಭಕೆ ಕಟ್ಟಿಯಚಿಸುವರೇನು ದೀಕ್ಷಿತರು? || ೭೪ ||
ವೇಷಧರವಟುವಿಂತು ಶ್ರೀಶಶಿ- । ಭೂಷಣನ ಪರಿಹಾಸ ಮಾಡಲು ।
ರೋಷದಿಂ ಗಿರಿಕುವರಿ-ಕೆಂದುಟ ಕಂಪಹೊಂದಿದುದು ||
ವಾಸುಕಿಯ ತೆರದಿಂದಲಾಗಲೆ । ವಾಸಿತೆಯ ಕಣ್ಕೆಂಪಗಾದವು ।
ಭೀಷಣಾಕೃತಿಯಿಂದ ಭೀಕರಳಾಗಿ ತೋರಿದಳು. || ೭೫ ||
ಸುಂದರಾಂಗಿಯು ನೊಂದು ಮನದೊಳ- । ಗಂದು ವಟುವಿಪ್ರನಿಗೆ ನುಡಿದಳು।
ಮಂದ ಭಾಗ್ಯನೆ ಚಂದ್ರಶೇಖರನೇಕೆ ಪರಿಪರಿಯ ||
ನಿಂದಿಸುವೆಯವನಳವು ತಿಳಿಯದೆ । ಮಂದಮತಿಗಳು ವಂದ್ಯರಾದವ- ।
ರಂದವರಿಯದೆ ವ್ಯರ್ಥವಾಗಿಯೆ ಜರೆವ ತೆರದಲ್ಲಿ || ೭೬ ||
ದಾರಧನ ಮೊದಲಾದ ವೈಭವ । ಕೋರುವಂತಹ ಮನುಜರಾಪ- ।
ದ್ಭಾರವನು ದೂರೈಸಲಿಚ್ಛಿಪ ನರರು ಜಗದೊಳಗೆ ||
ಬಾರಿಬಾರಿಗೆ ಬಿಡದೆ ಮಂಗಲ- । ಚಾರುಕಾರ್ಯಗಳನ್ನು ಚರಿಪರು।
ಮೂರು ಲೋಕದ ಶರಣನಿಗೆ ಸ್ವಾಚಾರದಿಂದೇನು? || ೭೭ ||
ಧನಕೆ ಯರಿಯಾಗಿರ್ದರೂ ಶಿವ । ಜನಕನಿರುವನು ವಿಭವಜಾತಿಗೆ ।

ಕುಣಿವ ಭೂಮಿಯು ವಾಸಿಯಾದರು ಪತಿಯು ಮೂಜಗಕೆ ||
ಜನಕೆ ಭೀಕರ ತೋರಿದರು ಸ- | ಜ್ಜನರಿಗತಿಸುಖರೂಪನಿರುವನು. |
ಗುಣಗಳನ್ನೆಂತರಿವರೋ ವೇಣವನ ಮಹಿಮೆಯನು. || ೭೮ ||
ಸಕಲ ಜಗದೊಳಹೊರಗೆ ವ್ಯಾಪಿಸಿ | ಪ್ರಕಟವಾಗಿರುತಿರುವ ವಿಶ್ವಾ- |
ತ್ಮಕನು ಸರ್ಪಗಳನ್ನು ರತ್ನಾಭರಣಗಳನಥವಾ ||
ಮುಕುಟ ಪರಿಧಾನಿಸಿದರೇನದು | ವಿಕಟ ನೃಕಪಾಲವನು ಧರಿಸಿದ- |
ರಕಟ ಸರ್ವೇಶ್ವರನ ರೂಪದ ಜ್ಞಾನವಾಗುವದೆ? || ೭೯ ||
ಅತುಲ ತೇಜನ ಸಂಗಮಾತ್ರದೆ | ಚಿತೆಯಮಂಗಲ ಭಸ್ಮವಾದರು |
ಪತಿತರನು ಪರಿಶುದ್ಧಮಾಡುವಶಕ್ತಿ ತಳೆಯುವದು. ||
ಅತಿಮನೋಹರ ತಾಂಡವದಿ ಪದ- | ಹತಿಗೆಯುದರಿದ ಭಸ್ಮಕಣವನು |
ನುತಿಸಿ ಸುರಪತಿ ಸತತ ಮಸ್ತಕದಲ್ಲಿಧರಿಸುವನು. || ೮೦ ||
ನೆತ್ತಿಯಿಂ ಮದವಾರಿಸುರಿಯುವ | ಮತ್ತವಾರಣವೇರಿ ಗಮಿಸುವ |
ವಿತ್ತವೈಭವದಿಂದ ಮೆರೆಯುತ್ತಿರುವ ಶಚಿಪತಿಯು ||
ಎತ್ತುಹಚ್ಚುವ ಕೃತ್ತಿವಾಸನ | ತೋತ್ತ್ರರವ ಮಾಡುತ್ತ ವಾನವ |
ತೆತ್ತಿ ಮಸ್ತಕವನ್ನು ಪಾದಕೆ ಸತತಮಣಿಸುವನು. || ೮೧ ||
ನಂದಿವಾಹನನನ್ನು ಪರಿಪರಿ | ನಿಂದಿಸಿದೆಯದರೊಳಗೆ ನಿಜನು- |
ಯೊಂದು ಜನಿಯಾತನದದೆತ್ತಣದೆಂದು ನುಡಿದದ್ದು ||
ಮಂದ ಭಾಗ್ಯನೆ ಸತ್ಯವಿರುವದು | ತಂದೆಚತುರಾನನ ಕಾರಣ- |
ಸುಂದರಾಂಗ ಮಹೇಶನಿರುತಿರೆ ತಿಳಿಯುವೆಂತವನ? || ೮೨ ||
ಸಾಕು ಸಾಕು ವಿವಾದವೇತಕೆ | ಸ್ತೋಕವಾದರು ಗುಣಗಳಿಲ್ಲದೆ |
ಲೋಕದೊಡೆಯನು ನೀನು ಪೇಳಿದ ಹಾಗೆ ನಿಜವಾಗಿ ||
ಏಕೆ ತಾನಿರವಲ್ಲ ಮನಸಿಗೆ | ಬೇಕು. ಪ್ರಿಯತಮ ನನಗೆ ಸಾಂಬನು |
ಲೋಕಲಜ್ಜೆಗೆ ಕಾಮವೃತ್ತಿಯನಾರು ತ್ಯಜಿಸುವರು! || ೮೩ ||
ಮರಳಿ ಮಾತುಗಳನ್ನು ಪೇಳುವ | ತೆರದಿಯೀಪಾರುವನ ತುಟಿಗಳು |
ಸ್ಫುರಣಹೊಂದುತ್ತಿರುವವೆಲೆಸಖಿ ಹೊರಡಿಸೀಗಿವನ. ||
ಜರಿದು ಗುರುಜನರನ್ನು ದುರುಳನು | ಪರಮ ಪಾತಕವನ್ನುಗಳಿಸುವ |
ಬರುವದದು ನಮಗಾದರೂ ದುರ್ವಚನಗಳಕೇಳಿ. || ೮೪ ||
ಇರಲಿವಟುವಿಲ್ಲಿದ್ದ ಹಾಗೆಯೆ | ಹೊರಟು ನಾನೇ ಪೋದರಾಯಿತು |
ಹರಟೆಚೋರನ ದರ್ಶನೇತಕ್ಕೆಂದು ಪೊರಮಡಲು, ||

ಹರನು ನಿಜರೂಪವನು ತೋರಿಸಿ । ಗಿರಿಜೆಮೊಗವನು ನೋಡಿಯಾಕೆಯ ।
ಕರವ ಪಿಡಿದವಳನ್ನು ತಡೆದನು ಪರಮಹರುಷದಲಿ. ॥ ೮೫ ॥
ಹರನದರುಶನವಾದ ಕೂಡಲೆ । ಮರೆತು ದೇಹದ ಭಾವವನು ಸತಿ-।
ಬೆರೆತು ತದ್ರೂಪದಲಿ ಪರಮಾನಂದದಲಿ ಮುಳುಗಿ; ॥
ಸರಸಸಾತ್ವಿಕ ಭಾವತಳೆದಳು । ಗಿರಿಜೆಸರಿಯದೆ ನಿಂತುಕೊಳ್ಳದೆ ।
ಗಿರಿಯರೋಧದೆ ನದಿಯು ಹೊಂದಿದ ಗತಿಯ ತಾಳಿದಳು ॥ ೮೬ ॥
ಸನ್ನುತಾಂಗಿಯೆ ಬನ್ನಬಡದಿರು । ನಿನ್ನ ಘನತಪಕಾನು ಮೆಚ್ಚಿದೆ ।
ರನ್ನೆ ನಿನ್ನವನಾದೆ ಮಾನಿನಿ ಯೆಲ್ಲ ಪರಿಯಿಂದ ॥
ಎನ್ನುತಲೆ ಗಿರಿರಾಜಕನ್ಯೆಯ । ಮುನ್ನಮಾಡಿದ ತಪದ ಕಷ್ಟವು ।
ವನ್ನಿಯಿಂದಲೆ ಕರಗಿ ಹೋಯಿತು ಹರನ ಕರುಣೆಯಲಿ. ॥ ೮೭ ॥

ಪಾರ್ವತೀ ಪರಿಣಯವು.

(ಸರ್ಗ ೩)

ಸಾಂಬಸರ್ವಾತ್ಮಕನು ಮೂಜಗ- । ದಂಬೆಗಾಶ್ವಾಸಿಸಿದ ನಂತರ ।
ತುಂಬುವೆರೆ ಪೊಗಳಿದವಳು ತನ್ನಯ ಸಖಿಯ ಮುಖದಿಂದ ॥
ಕುಂಭಿನೀಧರನಾಜ್ಞೆಯಿಂದಲೆ । ಶಂಭೊ ನನ್ನುದ್ವಾಹ ಕಾರ್ಯವ ।
ತುಂಬಸಂಭ್ರಮದಿಂದ ಜರಗಿಪುದೆಂದು ಪೇಳಿದಳು. ॥ ೧ ॥
ಚದುರಧವ ಮಾಧವನು ಬರುತಿರೆ । ಸುದತಿಮಾವಿನ ಮರದ ಶಾಖೆಯು ।
ಮದಿಸಿ ಪಿಕಮುಖದಿಂದ ಮಧುರಾಲಾಪಗೆಯ್ವಂತೆ ॥
ಮುದದಿ ಗಿರಿಜೆಯು ತನ್ನನಾಥಗೆ । ಹೃದಯದೊಳಗಿನ ಭಾವ ಕೆಳದಿಯ ।
ವದನದಿಂದರುಹಿದಳು ನಂತರ ಸ್ವಸ್ಥವಾಗಿರಲು; ॥ ೨ ॥
ನೀನು ಪೇಳಿದ ಹಾಗೆ ಮಾಡುವೆ । ಮಾನಿನಿಯೆ ಮನದೊಳಗೆ ಸಂಶಯ- ।
ವೇನು ತಾರದೆ ಮನೆಗೆ ಪೋಗೆಂದುಸುರಿ ಕಷ್ಟದಲಿ, ॥
ತಾನು ತತ್ಷಣದಲ್ಲಿ ತೇಜೋ- । ಮಾನಮೀರಿದ ಸಪ್ತಋಷಿಗಳ ।
ಧ್ಯಾನವನು ಮಾಡಿದನು ಗಂಗಾಧರನು ಲೀಲೆಯಲಿ. ॥ ೩ ॥
ಪಾರವಿಲ್ಲದ ಘೋರತಪವನು । ಪಾರುವರು ಚರಿಸಿರ್ದರಿಂದೀ ।
ಚಾರುಗಾತ್ರೆಯರುಂಧತಿ ತಪಸ್ಸಿದ್ಧಿಯೆಂಬಂತೆ ॥
ತೋರುತಿರುವಳು ಜನರಕಣ್ಣಿಗೆ । ಸಾರಸಾಕ್ಷಿಯ ದೃಷ್ಟಿ ಪತಿಪಾ- ।
ದಾರವಿಂದದ ಕಡೆಗೆ ಸೇರಿಹುದೇನು ಸೋಜಿಗವು. ॥ ೪ ॥
ತೀರದಲ್ಲಿರುತಿರುವ ಸುರ ಮಂ- । ದಾರ ಪುಷ್ಪಗಳಿಂದ ಮೇಣ್ದಿಗ್- ।
ವಾರಣಂಗಳ ದಾನವಾರಿಗಳಿಂದ ಕೂಡಿರುವ ॥
ಪಾರವಿಲ್ಲದವ್ಯೋಮಗಂಗೆಯ । ನೀರಿನಲಿ ಸರಿಯಾಗಿ ಸ್ನಾನವ ।
ಪಾರುವರು ಜರಗಿಸಿದ ಮೇಲ್ಬರನನ್ನು ಕಾಣಲ್ಕೆ. ॥ ೫ ॥

ಧರಿಸಿ ಜನಿವಾರವನು ಕೊರಳಲಿ, । ಕರದ ಬೆರಳುಗಳಲ್ಲಿ ಮಣಿಮಯಿ ।
ಸ್ಮರಣಿಯನು, ಭರಜರದ ವಲ್ಕಲವನ್ನು ಋಷಿವರರು ॥
ನರರು ಬಯಸಿದ್ದನ್ನು ಕೊಡುತಿಹ । ಸುರರ ಕಲ್ಪದ್ರುಮಗಳಂತೆಯೆ ।
ವರವನಾಶ್ರಮದಿಂದ ಶೋಭೆಯನಾಂತು ಚರಿಸಿದರು. ॥ ೬ ॥
ತರಣಿ ಋಷಿಗಳು ಬರುವದನು ಕ- । ಣ್ದೆರದು ನೋಡಿದ ಕೂಡಲೇ ಗಡ ।
ಸರಿಸಿ ತೇರಿನಕೇತುವನು ಸಂಭ್ರಮದಿ ಕರಗಳನು ॥
ಪರಮಗುರುತರ ಭಕುತಿಯಿಂದಲೆ । ಭರದೆ ಜೋಡಿಸಿ ಶಿರವಬಾಗಿಸಿ- ।
ವರವ ಯಾಚಿಪತೆರದಿ ತೋರಿದನೇನು ಪೇಳುವೆನು. ॥ ೭ ॥
ಪ್ರಳಯ ಕಾಲಕ್ಕಿಳೆಯವಲಯವು । ಮುಳುಗಿ ಪಾತಾಳಕ್ಕೆನಡೆದಿರೆ ।
ನಲಿವಿನಿಂದವಳನ್ನು ಪೊರೆಯುದಕ್ಕೆ ನರಹರಿಯು ॥
ತಳೆದ ಶೂಕರ ವಿಗ್ರಹದ ಪಲ್- । ಗಳನು ಪಿಡಿದೀ ಋಷಿವರೇಣ್ಯರು ।
ವಿಲಯಹೊಂದದೆ ಯುಳಿದುಕೊಂಡಿಹರೇನು ಪೇಳುವೆನು? ॥ ೮ ॥
ಕಮಲಸಂಭವನಿಂದ ರಚಿಸಿದ । ವಿಮಲಸೃಷ್ಟಿಯ ಶೇಷಭಾಗವ ।
ಮಮತೆಯಿಂದೀ ಸಪ್ತಋಷಿಗಳು ಪೂರ್ಣತೆಗೆಯೊಯ್ದು ॥
ಕ್ರಮವ ಪಟ್ಟಿಹರೆಂದು ವ್ಯಾಸಾ- । ದ್ಯಮಿತಪೌರಾಣಿಕರ ಸಮಿತಿಯು ।
ಕ್ರಮಕೆಸರಿಯಾಗಿವರಿಗಾದರು ಜನಕರೆನ್ನುವದು. ॥ ೯ ॥
ಇಂದುಮಾಡಿದ ಕರ್ಮಫಲವನು । ಮುಂದೆ ಜನರುಪಭೋಗಿಸುತ್ತಿಹ- ।
ರೆಂದು ಶಾಸ್ತ್ರವು ಪೇಳುತಿರುವದುಕಂತರವದಿಂದ. ॥
ಮುಂದಿಯಂತೆಯೆ ಸಪ್ತಋಷಿಗಳು । ಚಂದ ಭೋಗಗಳನ್ನು ಭೋಗಿಸೆ ।
ಬಿಂದುಮಾತ್ರವು ಕರ್ಮಲೇಪಾಗುವದೆಯವರಲ್ಲಿ? ॥ ೧೦ ॥
ಅತುಲತೇಜೋರಾಶಿಋಷಿಗಳು । ಸತಿಯರುಂಧತಿಯೊಡನೆ ಯಾಗಸ- ।
ಪಥದೊಳತಿಶಯ ಬೆಳಕಿನಿಂದಲೆ ಬೆಳಗಿ ದಶದಿಶೆಯ ॥
ಪಥಿಕಜನಕಣ್ಗಳಿಗೆ ಸಂತಸ । ವಿತರಿಸುತೆ ಬಂದೀಶನೆಡೆಯಲಿ ।
ನುತಿಸಿದರು ಹರಪಾದಪದ್ಮಗಳನ್ನು ವಂದಿಸುತೆ ॥ ೧೧ ॥
ಮುಂಡೆನಿಂತಿರುವಂಥ ತಾಪಸ- । ವೃಂದವನು ಮೇಣವರ ಸಂಗಡ. ।
ಬಂದಸತಿಯನು ಸಾಮ್ಯಗೌರವದೃಷ್ಟಿಯಿಂದಾಗ ॥
ಇಂದುಧರನೋಡಿದನು ಕೃಪೆಯಲಿ. । ಕುಂದುವಿಲ್ಲದ ಗುಣವೆಪೂಜ್ಯವು. ।
ಸುಂದರಾಕೃತಿಲಿಂಗಗಳ ಸಜ್ಜನರು ನೋಡುವರೆ? ॥ ೧೨ ॥

ಪ್ರತಿಭೆ ಯಿಲ್ಲದ ಜನರು ಜಗದಲಿ । ಸತತ ಮಹದಾಚರಣವೇ ಸ- ।
ದ್ಗತಿಗೆ ಸಾಧನವೆಂದು ನಂಬುವರೆಂದು ಭವಹರನು ॥
ಹಿತವನವರಿಗೆ ತೋರ್ಪೆನೆಂದುರೆ । ಸತಿಯದರುಶನವಾದಕೊಡಲೆ ।
ಮತಿಗೆ ಸ್ತ್ರೀಸಂಗ್ರಹದ ರತಿಯಾದಂತೆ ನಟಿಸಿದನು. ॥ ೧೩ ॥
ಮುನ್ನಮಾಡಿದ ತನ್ನತಪ್ಪಿಗೆ । ಮನ್ಮಥನು ಭಯಗೊಂಡು ಮನದೊಳು ।
ಬನ್ನಬಡುತವನಡುಗಿಕೊಂಡಿರಲಾಗಿ ಶಶಿಧರನು ॥
ಸನ್ನುತಾಂಗಿಯ ಪಾಣಿಪೀಡನ- । ವನ್ನು ಜನಹಿತಕಾಗಿ ಮಾಡುವೆ ।
ನೆನ್ನುತಲೆ ತಲೆದೋರಹತ್ತಿದನಾಗ ಧೈರ್ಯದಲಿ ॥ ೧೪ ॥
ಸಾಂಗವೇದವನರಿತಋಷಿಗಳು । ಹಿಂಗದಂತಹ ಪ್ರೇಮದಿಂದಾ- ।
ಗಂಗದಲಿ ರೋಮಾಂಚವಡರಿರೆ ಪರಮ ಭಕುತಿಯಲಿ ॥
ಸಂಗರಹಿತೋತ್ತುಂಗಮಹಿಮನ । ಗಾಂಗ-ಮಂಗಳ-ಭಂಗಭೂಷಿತ ।
ಮಂಗಳಾಂಗಮಹೇಶನನು ಬಹು ತುತಿಸಿ ನಮಿಸಿದರು. ॥ ೧೫ ॥
ಬಿಡದೆ ವೇದಾಧ್ಯಯನ ಮಾಡಿದ । ಬಿಡದೆ ವಹ್ನ್ಯರ್ಚನೆಯ ಮಾಡಿದ ।
ಬಿಡದೆ ಕಡುತಪವನ್ನು ಮಾಡಿದ ಪುಣ್ಯಫಲವಿಂದು ॥
ಹುಡುಕಿದರು ಸಿಗದಂಥ ಮೂಜಗ- । ದೊಡೆಯನೇ ನಿನ್ನಡಿಯದರುಶನ ।
ಪಡೆದಮೂಲಕ ನಮಗೆ ದೊರೆಯಿತು ಮಹತಿಪೆರ್ಚಿದುದು. ॥ ೧೬ ॥
ಹಲವು ಸಾಧನಗಳನು ಮುನಿಗಳು । ಹಲವು ಸಾಧನಗಳನು ಋಷಿಗಳು ।
ಹಲವು ಸಾಧನಗಳನು ತಾಪಸಜನರು ಮಾಡಿದರು. ॥
ಫಲವುಗಾಣದೆ ಬಳಲಿದರು ನಿ- । ನ್ನಳವು ತಿಳಿಯದೆ ಜನ್ಮಕಳೆದರು ।
ಜ್ವಲನನೇತ್ರನೆ ಸ್ಮರಿಸಿ ನಮ್ಮನು ಧನ್ಯರೆನಿಸಿರುವೆ. ॥ ೧೭ ॥
ನಿನ್ನ ಸ್ಮರಿಸುವ ಜನರು ಧನ್ಯರು । ನಿನ್ನ ಮನಸಿನ ವಿಷಯರಾದವ- ।
ರಿನ್ನು ಪುಣ್ಯಾತ್ಮಕರ ಮಧ್ಯದೆ ಶ್ರೇಷ್ಠರಾದವರೇ ॥
ಜೊನ್ನದೊಡಲನ ಮತ್ತು ದಿನಕರ- । ನುನ್ನತದ ಪದಗಳಿಗೆ ಮೀರಿದ ।
ಮನ್ನಣೆಯ ಸ್ಥಾನಾರ್ಹರೆಂದೆಮಗಿಂದು ಮಾಡಿರುವೆ. ॥ ೧೮ ॥
ಭೃತ್ಯರಾದೆಮ್ಮನ್ನು ದಯದಲಿ । ಸತ್ಯಸಂಧನೆ ಸ್ಮರಿಸಿ ನೀಕೃತ- ।
ಕೃತ್ಯರೆಂದೆಮಗೆನಿಸಿದಕೆ ನಮಗಾದ ಮೋದವನು ॥
ಸತ್ಯವಾಗಿಯೆ ಪೇಳಲಾರೆವು । ಸ್ತುತ್ಯರಿಂಪಡೆದಂಥ ಮನ್ನಣೆ ।
ಪ್ರತ್ಯಯಕೆ ನಿಜವಾಗಿ ಕಾರಣವಾಗುವದು ಪ್ರಭುವೆ ॥ ೧೯ ॥
ಎಲ್ಲರಂತಃಕರಣವನ್ನರೆ । ಬಲ್ಲದೇವನೆ ನಿನ್ನ ಮಾನಸ- ।

ದಲ್ಲಿವರ್ತಿಪ ಹೇತುವನ್ನಾವೆಂತು ಪೇಳುವೆವು? ॥
ಇಲ್ಲಿನಮ್ಮಿಂದೇನು ಕಾರ್ಯವು । ವಲ್ಲಭನೆ ಜರಗುವದು ದಯೆದಿಂ- ।
ದೆಲ್ಲವನು ಪೇಳೆಮಗೆ ಪಾಲಿಪುದೆಂದು ಬಿನ್ನವಿಸೆ ॥ ೨೦ ॥
ಎನಲು ಘನಗಂಭೀರರವದಿಂ । ಮುನಿಗಳಿಗೆಶಿವನಾಗನುಡಿದನು ।
ನನಗೆ ಸ್ವಾರ್ಥಕ್ಕಾಗಿ ಮಾಡುವ ಕಾರ್ಯವೊಂದಿಲ್ಲ, ॥
ಘನದನೀರ್ವನಿ ಬಯಸಿಚಾತಕಿ । ವಿನತಿ ವಜ್ರಿಗೆ ಮಾಳ್ಪತೆರದಲಿ ।
ತನುಜನನ್ನುತ್ಪಾದಿಸುವದಕೆ ಸುರರು ಬಂದೆನಗೆ ॥ ೨೧ ॥
ವಿನಯದಿಂ ಬಿನ್ನವಿಸಿದಕೆ ನಾ- । ನನಮಿಷರಿಗನುಮತಿಸಿ ಕಳುಹಿಸಿ- ।
ದನಲಸಂಭಾವನೆಗೆ ಯಾಜ್ಞಿಕರರಣಿಕಾಷ್ಟವನು ॥
ಮನದೆ ಬಯಸುತ್ತಿರುವ ತೆರದಲಿ । ತನುಜನುತ್ಪಾದನೆಗೆ ಹಿಮನಗ- ।
ತನುಜೆಯನ್ನಾಹರಿಸಲಿಚ್ಛಿಪೆನನಘರೇ ನಾನು. ॥ ೨೨ ॥
ಧರೆಯ ಧುರವನು ವಹಿಸಿದಂತಹ । ಗಿರಿಯ ಮಗಳನು ನನ್ನಗೋಸ್ಕರ ।
ಪರಿಣಯದ ಕಾರ್ಯಕ್ಕೆ ಯಾಚನೆಯನ್ನು ಋಷಿವರರೆ ।
ತ್ವರಿತದಲಿ ನೀವ್ಮಾಡಿ ಸನ್ಮತಿ- । ಯರಿತು ಬಂದರೆ ಶೀಘ್ರವಾಗಿಯೆ ।
ಸುರರ ಮನದಭಿಲಾಷೆಯದು ಪರಿಪೂರ್ಣವಾಗುವದು. ॥ ೨೩ ॥
ನಿಮಗೆ ಸಮ್ಮತವಾದ ನಡತೆಯೆ । ತಮಗೆ ಧರ್ಮದ ಮಾರ್ಗವೆಂದುರೆ ।
ಸುಮತಿಗಳು ತಿಳಿಯುವರು ಮನದಲಿ ಲಗ್ನ ಘಟನೆಯಲಿ ॥
ಹಿಮಗಿರಿಯಕೂಡಿಂತುಪರಿಯಲಿ । ಪ್ರಮೆಯ ಮಾತುಗಳನ್ನು ನುಡಿಯುವ ।
ಕ್ರಮವ ಪೇಳುವದುಂಟೆ ಸರ್ವವನರಿತ ಋಷಿವರರೇ? ॥ ೨೪ ॥
ಸತಿಯರುಂಧತಿಯಂಥ ಪ್ರತಿಭಾ- । ಯುತಳು ನೆರವಾಗುವಳು ಕಾರ್ಯಕೆ ।
ಕಥನಮಾಡುವದೇನು ಸಾಧಿಸಿ ಕಾರ್ಯವನು ನೀವು ॥
ಅತಿಶಯಾತುರದಿಂದ ಪುನರಪಿ । ಶ್ರುತಿಪಥಕೆ ಬಂದಿಲ್ಲಿ ಸಾಗಿದ ।
ಕಥೆಯನುಸುರುವದೆಂದು ಹರನಪ್ಪಣೆಯ ಮಾಡಲ್ಕೆ ॥ ೨೫ ॥
ಹರುಷನಿರ್ಭರರಾಗಿ ಋಷಿಗಳು । ಹರನ ನಿರ್ದೇಶವನು ಮನ್ನಿಸಿ ।
ಚರಣಕಮಲಗಳನ್ನು ವಂದಿಸಿ ಹೊರಟರಾಕ್ಷಣಕೆ ॥
ಎರಲುಬಲದಿಂ ಹಾರಿ ಮೇಲಕೆ । ಚರಿಸಿ ತಾರಾಪಥದಿ ಹಿಮನಗ- ।
ಪುರಕೆ ಬಂದರು ಮನದವೇಗವ ಮೀರಿಪಾರುವರು ॥ ೨೬ ॥
ಪುರದಸುತ್ತಲೆ ಗಾಂಗವಾರಿಯು । ಪರಿಬೆ ಮೇಣ್ಥಳಥಳನೆ ಹೊಳೆಯುವ ।
ಸುರಸಪಾದೌಷಧಿಯ ವಲ್ಲಿಗಳಲ್ಲಿ ಮೆರೆಯುವವು. ॥

ಈರನಸಖಪುರವನ್ನು ಭರದಿಂ । ಹರಿಸಿತಂದಿಹರೆಂಬ ತೆರದಿಂ ।
ಪುರದಪರಮೆಯು ಕಣ್ಗೆ ತೋರಿತದೆಂತು ಬಣ್ಣಿಪೆನು ॥ ೨೭ ॥
ಪರಮ ಸೋಜ್ವಲವಾದ ಹೀರಕ- । ಮರಕತಾದಿಕ ರತ್ನನಿರ್ಮಿತ ।
ಪುರದಗೋಪುರಕೋಟೆಗಳ ಪಿರಿದಾದ ಚಲುವಿಕೆಯು ॥
ಸುರರ ತೋಟಗಳಲ್ಲಿ ಕಾಣದ । ನಿರುತದಲಿ ಫಲಫಲಿಪ ಸುಂದರ ।
ತರುಗಳಾಸ್ಥಳದಲ್ಲಿ ಋಷಿಗಳ ಕಣ್ಗೆ ತೋರಿದವು ॥ ೨೮ ॥
ಚರಿಪಗುಡ್ಡಗಳಂತೆ ಮೆರೆಯುವ । ಕರಿಗಳಾಸ್ಥಳದಲ್ಲಿ ಹೆದರದೆ ।
ಹರಿಗಳನು ಪರಿಗಣಿಸದಲೆ ನಿರ್ಭಯದಿ ತಿರುಗುವವು ॥
ಪರಮಸುಂದರವಾದ ಹರಿಗಳು । ಮರಿಸಿ ಮಾರುತ ವೇಗವನು ಹಿಮ- ।
ಪುರದಮಧ್ಯದಿ ಚರಿಸಿ ನಯನಾನಂದ ವೀಯುವವು ॥ ೨೯ ॥
ನಗನನಗರಿಯೊಳಿರ್ದ ಮನೆಗಳು । ಗಗನದುಪಹಾಸವನು ಮಾಡುತೆ ।
ನೆಗಹಿಮೊಗಗಳನಂದದಿಂ ಘನಗಳನು ಚುಂಬಿಪುವು ॥
ಚಿಗರಿಗಣ್ಣಿನ ಸ್ತ್ರಿಯಳ ಗಾಯನ । ಸೊಗಸಪಾದನರವವು ನರರಿಗೆ ।
ಮುಗಿಲಿನೊಳಗಿನ ಘನದಗರ್ಜನೆ ತೆರದೆ ತೋರಿದವು ॥ ೩೦ ॥
ವನಿತೆಯರು ಯೌವ್ವನದ ಭರದಲಿ । ವನಪಿನಿಂ ನಲಿನಲಿದು ರಮಣರ । ।
ಮನಕೆ ಮನಸಿಜನಾಟದೊಳು ಸಂತಸವನೀಯುವರು ॥
ವನವಿಹಾರಕೆ ಪೋದ ಜನರಿಗೆ । ವನದಿರಾಜಿಪವಲ್ಲಿಗಳ ಛವಿ ।
ವನಜ ಮಿತ್ರನ ತೆರದಿ ರಾಜಗೆ ತೋಷಕೊಡುತಿಹುದು ॥ ೩೧ ॥
ಜರೆಯು ವಾರ್ತೆಯನರಿಯರಲ್ಲಿಯು । ನರರು ಮರಣದ ಸುದ್ದಿಬಲ್ಲರೆ? ।
ಸುರತಸೌಖ್ಯಾನಂದದೊಳು ಮೈಮರೆತು ಮಲಗುವರು ॥
“ ಕೊರತೆ ” ಎಂಬುವ ಶಬ್ದವರಿಯರು । ಗರತಿಯರ ಪರಿದಾದ ಪ್ರೇಮದ ।
ಪರಮ ಮಂಗಲವಾರಿಯಲಿ ಮಜ್ಜನವ ಗೈಯ್ಯುವರು. ॥ ೩೨ ॥
ಸುಮದಚಾಪನ ಕೇಳಿಯಲಿ ಬಲು । ರಮಿಸಿ ಶ್ರಮಿಸಿದ ಪ್ರಮದೆಯರ ಕಡು
ಮಮತೆಯಲಿ ಲೋಲಾಡುತಿರುವರು ಜನರು ಮೋದದಲಿ ॥
ಭ್ರಮಿಸಿ ಯಮನಿಯಮಾದಿ ಸಾಧಿಸಿ । ಕ್ರಮದಿ ದಣಿಯುವರೇಕೆ ಮಾನವ- ।
ರಮರಪುರದಲ್ಲಧಿಕವೇನಿರುತಿಹುದೊ ನಾನರಿಯೆ ॥ ೩೩ ॥
ಇರಲಿ ಮುನಿಪುಂಗವರು ತ್ವರೆಯಲಿ । ಗಿರಿಯಮನೆಮುಂಭಾಗದಲಿ ನವ ।
ತರಣಿಪರಿಯಲಿ ಭ್ರಾಜಿಸುತೆ ನಭದಿಂದಲವತರಿಸೆ ॥
ಜೆರಗಿ ದ್ವಾರದ ಪಾಲಕರು ಋಷಿ- । ವರರ ಚರಣಗಳನ್ನು ವಂದಿಸಿ ।

ಚರಿಸಿದರು ಗೃಹಮಧ್ಯದೊಳು ಗಿರಿವರನಿಗರುಹಲ್ಕೆ. ॥ ೩೪ ॥
ವಂದನೀಯ ಮುನೀಂದ್ರರಲ್ಲಿಗೆ ಬಂದವಾರ್ತೆಯನರಿತು ಪರಮಾ- ।
ನಂದದಿಂ ಪೂಜೋಪಕರಣಗಳನ್ನು ಕೈಕೊಂಡು ॥
ಬಂದು ಸಾದರದಿಂದ ಗಿರಿವರ- । ನಂದುರುಷಿಗಳಿಗರ್ಘ್ಯಪಾದ್ಯಗ- ।
ಳಿಂದ ಪೂಜಿಸಿ ನಮಿಸಿ ಪರಿಪರಿಯಿಂದ ತುತಿಸಿದನು. ॥ ೩೫ ॥
ಧಾತುಣಾಮ್ರಾಧರನು ಪರಮಾ- । ದ್ಭೂತನಾದುನ್ನತಶರೀರನು ।
ಚೂತವೃಕ್ಷವಿಶಾಲ-ಸುಂದರ-ಭುಜಗಳುಳ್ಳವನು ॥
ಈತನೇ ಘನವಜ್ರಹೃದಯನು । ಖ್ಯಾತ ಹಿಮಗಿರಿನಾಥನೆಂದುರೆ ।
ಧೂತಪಾಪರು ತಿಳಿದು ಮನದೊಳು ಮನ್ನಿಸಿದರವನ. ॥ ೩೬ ॥
ಬಳಿಕ ಗಿರಿಜಾತಾತನಂತ- । ರ್ನಿಲಯದೊಳು ಕರೆದೊಯ್ದು ನಿರ್ಮಲ ।
ಗಳಲಿನಾಸನಗಳನು ಮುನಿಗಳಿಗರ್ಪಿಸಿಂತೆಂದಾ ॥
ಚಳಿಯಕಾಲಕ್ಕಿಳಿಯಮೇಲ್ಮರ- । ಮಳೆಯು ಬಿದ್ದಂತೀಗ ನಭದಿಂ- ।
ದಿಳಿದು ಬಂದೆನ್ನನ್ನು ಜನರೊಳು ಧನ್ಯನೆನಿಸಿದಿರಿ. ॥ ೩೭ ॥
ಅರಳು ತೋರದೆ ಮರಗಳಿಗೆ ಫಲ- । ಭರವು ಬಂದಂತಾಯ್ತು ತಮ್ಮಯ ।
ಬರುವಿಕೆಯು ನನಗೀಗ ಸೋಜಿಗವನ್ನು ಜನಿಸಿಹುದು ॥
ತರುಳಬುದ್ಧಿಯ ಮರುಳನಿಗೆ ಭವ- । ಹರಣಕಾರಣವಾದಜ್ಞಾನವು ।
ದೊರೆತ ತೆರದಿಂದೆನಗೆ ಪರಮಾನಂದವಾಗಿಹುದು. ॥ ೩೮ ॥
ಹರಿಯ ಪಾದಸರೋಜದಿಂಪಲೆ । ಹೊರಟಗಂಗೋದಕವು ನನ್ನಯ ।
ಶಿರದಿ ಮೆರೆಯುತ್ತಿರುವ ಮೂಲಕ ಮತ್ತೆ ಮುನಿವರರೆ ॥
ಪರಮ ಪಾವನವಾದ ತಮ್ಮಯ । ಚರಣಧೂಳಿಯ ಯೋಗದಿಂದೀ- ।
ಧರಣಿತಲ ಪರಿಶುದ್ಧ ವಾಯಿತು ಪೇಳಲಿನ್ನೇನು ॥ ೩೯ ॥
ಚರಣರೇಣುಗಳಿಂದ ಸ್ಥಾವರ- । ಗಿರಿಯ ರೂಪದ ಕಾಯವೆನ್ನದು ।
ಚರದ ರೂಪಶರೀರ ತಮ್ಮಯ ಸೇವೆಯಿಂದೀಗ ॥
ಎರಡು ತೆರದಿಂದಿಂತು ಪರಿಯಲಿ । ಪರಮ ಪಾವನ ವಾದವೆಲೆ ಋಷಿ- ।
ವರರೆ ನನಗಿನ್ನಾರು ಸರಿತೋರುವರು ಜಗದೊಳಗೆ? ॥ ೪೦ ॥
ಕೋವಿದೋತ್ತಮರಾದ ತಮ್ಮ ಪ್ರ- । ಭಾವದಿಂದೀ ಗುಹೆಗಳಲ್ಲಿಯ ।
ತೀವಿ ತುಂಬಿದ ಕತ್ತಲೆಯು ನಿರ್ಮೂಲವಾಗಿಹುದು. ॥
ಜೀವಕೋಟಿಗಳಲ್ಲಿ ಸೇರಿದ । ನಾವು ನೀವೆಂಬೆರಡು ತಂಡದ ।
ಭಾವನೆಯು ಬೈಲಾಗಿ ಪೋಯಿತು ನನ್ನ ಮನಸಿನಲಿ; ॥ ೪೧ ॥

ದೀನಸೇವಕನಾದ ನನ್ನಿಂ- । ದೇನು ಕೆಲಸಗಳಾಗುವವು? ಗುಣ- ।
ಹೀನನನು ಪರಿಶುದ್ಧಮಾಡುವದಕ್ಕೆ ಕನಿಕರದಿ ॥
ಧೇನುವತ್ಸದ ನ್ಯಾಯದಿಂದೀ- । ಸ್ಥಾನಕ್ಕೈದಿದಿರಲ್ಲದೇ ಮ- ।
ತ್ತೇನು ಕಾರ್ಯವಿಶೇಷವನು ನಾಂಕಾಣೆ ಮುನಿವರರೇ. ॥ ೪೨ ॥
ಆದರೂ ನನ್ನಿಂದ ಕಿಂಚಿ- । ತ್ಪಾದಸೇವೆಯ ಕೊಂಡು ನನ್ನನು ।
ಬೋಧರೂಪರೆ ಪಾಲಿಸುವಿರೆಂದಾನು ಕೋರುವೆನು. ॥
ಐದೆತನುಜೆಯ ನನ್ನ ಜಾಯೆಯ । ಮೋದದಿಂ ಮತ್ತೆನ್ನ ದೇಹವ- ।
ನೈದಿಸುವೆ ಭವದೀಯ ಕಾರ್ಯಕ್ಕಾಗಿ ಋಷಿವರರೇ. ॥ ೪೩ ॥
ಪರಮ ವಿನಯದಿ ಸಪ್ತಋಷಿಗಳಿ- । ಗರುಹೆ ಹಿಮಗಿರಿನಾಥನೀಪರಿ ।
ಸುರರ ಗುರುಗೀಷ್ಪತಿಯು ಪ್ರತ್ಯುತ್ತರವ ನಿತ್ತೆಂದಾ ॥
ಪುರುಷರೊಳು ನೀಧನ್ಯನಿರುತಿಹೆ । ಗುರುತರೋನ್ನತವಾದ ನಿನ್ನಯ ।
ಸರಸ ದೇಹಕ್ಕೊಪ್ಪುತಿರುವದು ಮನಸಿನುನ್ನತಿಯು. ॥ ೪೪ ॥
ಸ್ಥಿರಚರಾತ್ಮಕಭೂತಗಳನುರೆ । ಧರಿಸಿ ಯೊಡಲೊಳು ನೀನು ಪರಮೇ- ।
ಶ್ವರನ ಸ್ಥಾವರರೂಪದಪರವಿಭೂತಿಯೆನಿಸಿರುವೆ ॥
ಉರಗಶೇಷನು ತನ್ನಸಾಸಿರ- । ಪರಮ ಕೋಮಲ ಫಣಿಗಳಿಂದೀ- ।
ಧರಣಿಯನು ಹೊತ್ತಿರುವ ನಿನ್ನಾಧಾರ ಬಲದಿಂದ. ॥ ೪೫ ॥
ಹರಿಯಪಾದಸರೋಜದಿಂ ಹೊರ- । ಹೊರಟ ಸುರನದಿ ನಿನ್ನ ಪಾವನ- ।
ಶಿರದೆ ಮೆರೆಯುತ್ತಿರುವ ಮೂಲಕ ತೀರ್ಥವೆಂದೆನಿಸಿ ॥
ನರರ ಪಾಪಗಳನ್ನು ಹರಿಸುವ । ಪರಮ ಪಾವಿತ್ರ್ಯವನು ಹೊಂದಿತು ।
ಹರಿಯ ತೆರದಿಂದದಕೆ ನೀಂನಿಜ ತಾತನಾಗಿರುವೆ. ॥ ೪೬ ॥
ಪರಮ ಪುರುಷನ ಮಹಿಮೆಯಂತೆಯೆ । ಗಿರಿಯೆ ಧರೆಯೊಳಹೊರಗೆ ವ್ಯಾಪಿಸಿ ।
ಮೆರೆಯುತಿಹೆ ನಿನಗಾರು ಸರಿ ತೋರುವರು ಜಗದೊಳಗೆ? ॥
ನರರು ಚರಿಸುವ ಯಜ್ಞಭಾಗವು । ಸುರರ ಜೊತಿಯಲಿ ನಿನಗೆ ದೊರೆಯು- ।
ತ್ತಿರುವ ಮೂಲಕ ಕನಕ ಗಿರಿಯನು ಮಿಕ್ಕಿಮೀರಿರುವೆ. ॥ ೪೭ ॥
ನಿನ್ನ ಸ್ಥಾವರ ದೇಹದಲಿ ಕಾ- । ಠಿಣ್ಯವಿದ್ದರು ಚರಶರೀರದೆ ।
ಮೊನ್ನಹಿಮಗಿರಿವರನೆ ಮಾರ್ದವ ತುಂಬಿಕೊಂಡಿಹುದು. ॥
ಧನ್ಯ ನೀನಿರುತಿರುವೆ ನಿರುತದೆ । ಪುಣ್ಯವಂತರ ಸೇವೆಯಲಿ ವೈ- ।

ಗುಣ್ಯವಿಲ್ಲದೆ ದೇಹವನು ಸಸ್ಯಾಗಿ ಸವಿಯಿಸುವೆ. ॥ ೪೮ ॥
ನಾವು ನಿನ್ನೆಡೆ ಬಂದ ಕಾರ್ಯವು । ದೈವವಂತನೆ ನಿನ್ನದಿರುವದು. ।
ನಾವು ನಿನಗುಪದೇಶಕರ್ತೃಗಳಾಗಿ ಬಂದುದಕೆ ॥
ಕೋವಿದನೆ ನೀನರ್ಜಿಸುವ ಬಹು । ಭಾವುಕದೆ ಫಲಭಾಗದಂಶವು ।
ಸೇವಿಸುವೆವಾವದನೆ ಪೇಳುತ್ತಿಹೆವು ಕೇಳೆಂದು ॥ ೪೯ ॥
ಸ್ಥಾವರಾತ್ಮಕ ದೇಹ ನಿನ್ನದು । ಗ್ರಾವಮಯ ವಾಗಿರ್ದರೂ ತವ ।
ಜೀವರೂಪಾತ್ಮಕ ಶರೀರವು ಭಾವಬಲದಿಂದ ॥
ಆವಗಂ ಬಹು ನಮ್ರತನದಲಿ । ಸೇವಿಪುದು ಸಜ್ಜನರನನುದಿನ ।
ನಾವು ಬಂದಿಹ ಕಾರ್ಯವನ್ನಾಲೈಸು ಗಿರಿವರನೇ ॥ ೫೦ ॥
ಆವನೀ ಜಗವನ್ನು ತನ್ನಯ । ಭಾವನೆಯ ಬಲದಿಂದ ನಿರ್ಮಿಸಿ ।
ಕಾವವನು ಮತ್ತದನು ಸಂಹರಿಸುವನೊ ತನ್ನಲ್ಲಿ ॥
ದೇವದೇವೋತ್ತಮನು ಸರ್ವ-। ಕ್ಕಾವನಧಿಪತಿಯಾಗಿ ಮೆರೆಯುವ ।
ಸೇವಿಸುವನಣಿಮಾದಿಸಿದ್ಧಿಗಳನ್ನು ಲೀಲೆಯಲಿ; ॥ ೫೧ ॥
ಕಾವನನು ನಿರ್ದಾಳಿಸಾತನ । ಭಾವಕೆಯ ಪ್ರಾರ್ಥನೆಗೆ ಮೆಚ್ಚು- ।
ತ್ತಾವನವನನು ಮಗುಳಿ ಬದುಕಿಸಿದಾವ ಶಿವಮಯನೋ ।
ಪಾವಕೇಕ್ಷಣ ಕೇವಲಾತ್ಮನೊ । ಪಾವನಾಂಘ್ರಿಪರೇಶನಾತನೆ ।
ದೇವಿಪಾರ್ವತಿಯನ್ನು ಪರಿಣಿಸಬಿಚ್ಛಿಸೆಮ್ಮನ್ನು ॥ ೫೨ ॥
ಕಳುಹಿದನು ಗಿರಿವರನೆ ನೀನಿ- । ನ್ನಳುಕದಲೆ ಮನದೊಳಗೆ ಕಿಂಚಿತ್- ।
ಗಳಿಸು ಕನ್ಯೆಯನರ್ಪಿಸಾತಗೆ ಪರಮ ಸುಕೃತವನು. ॥
ಅಳಿಯನಾದರೆ ನೀಲಕಂಠನು । ಕುಲವ ನಿನ್ನದು ಶುದ್ಧವಾಗುವ- ।
ದಿಳೆಯೊಳೆಲ್ಲರು ನಿನ್ನ ಪ್ರಾರಬ್ಧವನೆ ಬಯಸುವರು. ॥ ೫೩ ॥
ಸ್ಥಿರಚರಾತ್ಮಕವಾದ ಜಗತಿಗೆ । ಪರಮ ಪುರುಷನು ತಂದೆಯಲ್ಲವೆ? ।
ಗಿರಿಜೆಯಾತನ ವರಿಸಿ ಸೃಷ್ಟಿಗೆ ಮಾತೆಯೆಂದೆನಿಸಿ ॥
ಹರನ ಪಾದಂಗಳಿಗೆ ವಂದಿಸಿ । ಸುರರು ನಂತರದಲ್ಲಿ ಗಿರಿಜೆಯ ।
ಚರಣ ಸರಸಿಜಗಳನು ನಮಿಸುವರೆಂದು ಕೋರುವೆವು. ॥ ೫೪ ॥
ಮಾನವತಿ ಮದಿಮಗಳು ಪಾರ್ವತಿ । ದಾನಕೊಡುವವ ನೀನು ವರನೀ- ।
ಶಾನ ಸಚ್ಚಿತ್ಘನ ಸದಾಶಿವ ಸಗುಣನಿರ್ಗುಣನು. ॥
ದಾನಯಾಚಕನೆಯನ್ನು ಮಾಡುವ । ನಾನು ಮುಂತಾದೇಳು ಋಷಿಗಳು ।
ಧ್ಯಾನನಿರತರು ಲಗ್ನಘಟಿಸಲ್ಕೇಕೆತಡವಿನ್ನು; ॥ ೫೫ ॥

ಮಂದಿಯನ್ನೆಂದೆಂದು ಸ್ತುತಿಸದ । ಮಂದಿಯನ್ನೆಂದೆಂದು ನಮಿಸದ ।
ವಂದನೀಯಮಹೇಶನಿಗೆ ಮೇಣ್ ಸ್ತೂಯಮಾನನಿಗೆ ॥
ಸುಂದರಾಂಗಿಯನಿಂದುಮಾನಸ- । ದಿಂದಲರ್ಪಿಸಿ ಜಗದ ತಂದೆಯು- ।
ತಂದೆ ಸಮ ಮಾನಾರ್ಹ ನೀನಾಗೆಂದು ಮುನಿನುಡಿಯೆ. ॥ ೫೬ ॥
ಸಂತಸದೆ ಗಿರಿವರನು ಮಗಳನು । ಕಂತುಹರನಿಗೆ ಮನದಿ ಯರ್ಪಿಸಿ ।
ಪಿಂತೆ ನಿಂತಿರುವಂಥ ಕಾಂತೆಯ ಮುಖವ ನೀಕ್ಷಿಸಲು ॥
ಚಿಂತೆ ಮಾಡುವದೇತಕಿದರಲಿ । ಕಾಂತನೇ ನಿನ್ನಂತೆ ನನ್ನಯ ।
ಸ್ವಾಂತರಂಗದ ಮತವದಿರುವದು ಕೊಟ್ಟು ಮಗಳನ್ನು ॥ ೫೭ ॥
ಘನತೆಯನು ಪಡಿಯೆಂದು ಮೇನೆಯು । ವಿನಯದಿಂಗಿರಿವರನಿಗುಸುರಲು ।
ತನುಜೆಯನು ಮಣಿಕನಕವಸ್ತುಗಳಿಂದ ಸಿಂಗರಿಸಿ ॥
ತನಯೆ ವಿಶ್ವೇಶನಿಗೆ ನಿನ್ನನು । ಮನಸಿನಿಂದರ್ಪಿಸಿದೆ ನಿನ್ನಿಂ ।
ದೆನಗೆ ಸದ್ಗತಿಯಾಗುವದು ಪರಮೇಶ ದಯದಿಂದ ॥ ೫೮ ॥
ತನುಜೆಗೀಪರಿ ನುಡಿದು ತತ್‌ಕ್ಷಣ । ಮುನಿವರೇಣ್ಯರೆ ಭುವನದೊಡೆಯನ ।
ವಿನಯಗುಣ ಸಂಪನ್ನ ಗೃಹಿಣಿಯು ನಮಿಸುವಳು ನಿಮಗೆ ॥
ಎನಲು ಋಷಿಗಳು ಮತ್ತರುಂಧತಿ । ಮನದ ಕಾಮನೆ ಪೂರ್ಣವಾಗಲಿ ।
ತನಯೆ ಸರ್ವೇಶ್ವರನು ಮೆಚ್ಚುವನೆಂದು ಹರಸಿದನು ॥ ೫೯ ॥
ಮೃಡನ ಪೆಂಡತಿಯನ್ನರುಂಧತಿ । ತೊಡೆಯಮೇಲೆತ್ತಿರಿಸಿ ಕೊಂಡಳು ।
ಗಡನೆ ಮೈದಡವುತ್ತಲಾಕೆಯಮುಖವ ಚುಂಬಿಸುತೆ ॥
ನುಡಿದಳೆಲೆ ಪಾರ್ವತಿಯೆ ನಿನ್ನಯ । ಧೃಡತೆಗೊಲಿದನು ವಿಶ್ವನಾಥನು ।
ಕಡೆಗೆ ಪಡೆ ಜಗದೊಡೆಯಸಾಂಬನ ಪ್ರೇಮವನ್ನೆಂದು ॥ ೬೦ ॥
ಭಾವಿ ತನ್ನಣುಗೆಯ ವಿಯೋಗದ । ಭಾವನೆಯ ಭಾವಿಸುತ ಮಗಳನು ।
ಭಾವೆ ಮೇನೆಯು ಸಾಶ್ರುಪೂರ್ಣೇಕ್ಷಣದಿ ನೋಡಿದಳು ॥
ದೇವ ಮೃತ್ಯುಂಜಯನ ಪೆಂಡತಿ- । ಗಾವಮಾತಿನ ಕೊರತೆಯುಂಟೆ ? ।
ಜೀವಲೋಕದ ಜನರು ಮೋಹವನೆಂತು ತ್ಯಜಿಸುವರೋ ॥ ೬೧ ॥
ಪರಿಣಯದ ತಿಥಿ ಯರುಹಬೇಕೆಂ- । ದುರಗಭೂಷಣನಾಪ್ತನಾದಾ ।
ಗಿರಿವರನು ರುಷಿಗಳಿಗೆ ಪರಮಾದರದಿ ಕೇಳಿದಕೆ ॥
ಎರಡುಮತ್ತಿನ್ನೆರಡು ದಿವಸಕೆ । ಜರಗಿಸುವದೀಲಗ್ನಕಾರ್ಯವ ।
ನಿರಲಿ ಮಪ್ಪಣೆಯೆಂದು ಪೇಳಲ್ಲಿಂದ ಹೊರಟವರು ॥ ೬೨ ॥
ಭರದಿ ಹರಸಿದ್ದೆಡೆಗೆ ಬಂದರು ಚರಣಕಮಲಗಳನ್ನು ವಂದಿಸಿ ।

ಕರಗಳನು ಮುಗಿದವನಿಗುಸುರಿದರಾದ ವೃತ್ತವನು. ॥
ಹರುಷದಿಂ ಗರಕಂಠನನು ಋಷಿ-। ವರರು ಪರಿಪರಿ ಸ್ತೋತ್ರಮಾಡು-।
ತ್ತಿರದೆ ಹರನಪ್ಪಣೆಯ ಮೇರೆಗೆ ತೆರಳಿದರು ಮನೆಗೆ ॥ ೬೩ ॥
ಪರಮಕಷ್ಟದೆ ಸತಿಯಸಂಗಮ-। ವಿರಹ ಹರ ತಾಳಿದನು ಪ್ರೇಮದ।
ಭರಕೆ ಪ್ರತಿಕಾರವನು ಮಾಡುವರೆಂತೊ ಪಾಮರರು ॥
ಇರಲಿ. ಹರಗಿರಿಜಾವಿವಾಹಕೆ । ಹರಿಯು ಮುಂತಾದವರು ಬಂದರು ॥
ಪರಮಸೋತ್ಸವದಿಂದ ಮಂಗಲಕಾರ್ಯಮುಗಿಸಿದರು. ॥ ೬೪ ॥
ಹರನ ಪರಿಣಯ ಕಾವ್ಯವನು ನರ-। ಹರಿಯು ಸಿದ್ಧೇಶ್ವರನ ಕೃಪೆಯಿಂ।
ಬರೆದನದು ಸಜ್ಜನರ ಮನರಂಜನೆಯ ಮಾಡುವುದು ॥
ದುರಿತವನು ದೂರೈಸಿ ಬಿಡುವದು । ನಿರುತದಲಿ ಬಹು ಸೌಖ್ಯಕೊಡುವದು।
ಪರಸಸಾಯುಜ್ಯವನು ನರರಿಗೆ ಬಿಡದಲೀಯುವದು ॥ ೬೫ ॥



॥ ಶ್ರೀ ॥

ಪಾರ್ವತಿ ಪರಿಣಯದೊಳಗಿನ ಕಠಿಣ ಶಬ್ದಾರ್ಥದ ಕೋಶವು.

ಸರ್ಗ ೧

ಶ್ಲೋಕ	ಕಠಿಣಶಬ್ದ	ಅರ್ಥ
೨	ದಪ್ಪಕ	ಮಾರ.
೨	ಮುಪ್ಪೊಳಲ—ಚುರ್ಜಿಜನ.	ಮಾರಪುರವನ್ನು ಸುಟ್ಟವನ.
೩	ಕೊಂಚೆ.	ಸ್ವಲ್ಪ. ಕೆಲವು.
೪	ಅನಿಮಿಷರು.	ದೇವತೆ ಗಳು.
೪	ಪ್ರಣತಪಾಲ	ಶರಣ-ರಕ್ಷಕ.
೫	ಆಸ್ಮೃತಿ.	ಎಚ್ಚರ.
೬	ಅಂತರಾಯು.	ವಿಘ್ನ. ತೊಡರು.
೬	ಕಂತು.	ಮಾರ. ಮನ್ಮಥ.
೬	ಅಂತಕ.	ಯಮ.
೬	ಸನ್ನಿ ಕರ್ಷ.	ಸಾಮೀಪ್ಯ.
೭	ಆಖ್ಯಾತ	ಹೇಳಲ್ಪಟ್ಟ. ಪ್ರಸಿದ್ಧ.
೮	ನಲ್ಲೆ.	ಹೆಂಡತಿ.
೮	ಕಾತರ.	ಭೀತಿ.
೯	ಹದಿಬದೆ.	ಪತಿವ್ರತೆ.
೧೦	ಮಂದಭಾಗಿನಿ.	ದುರ್ದೈವಿ
೧೦	ಕಂದುಕ.	ಚಂಡು
೧೧	ವಿಲಯು.	ನಾಶ
೧೨	ಸ್ನೇಹ.	ಸ್ನೇಹ
೧೨	ಪಂಕೇ	ಕೆಸರು
೧೩	ವಿಪ್ರಿಯ	ಕೆಡಕು, ಬೇಕಾಗದಿದ್ದದು
೧೪	ಸಲ್ಲಾಪ	ಸಂಭಾಷಣೆ
೧೫	ಸದಮಲಾತ್ಮ	ಒಳ್ಳೇ ನಿರ್ಮಲ ದೇಹವುಳ್ಳ
೧೯	ಜೊನ್ನದೊಡಲ	ಚಂದ್ರ
೨೧	ಮಧುಪ	ಭ್ರಮರ

ಶ್ಲೋಕ	ಕಠಿಣಶಬ್ದ	ಅರ್ಥ
೨೨	ಸಮನಿಸು	ದೊರಕಿಸು
೨೩	ರಹ	ಏಕಾಂತ
೨೩	ಕೇಣ-	ನಾಚಿಕೆ
೨೪	ನಿಚಯು	ಸಮೂಹ
೨೪	ಸುಷುಮೆ	ಶೋಭೆ
೨೬	ಸುರತನಾಥ	ಮನ್ಮಥ
೨೯	ಕೋಲ್ತುದಿ	ಬಾಣದ ತುದಿ
೨೯	ಅಪಾಂಗ ದೃಷ್ಟಿ	ವಾರಿನೋಟ
೩೦	ಮಾಧವ	ವಸಂತ
೩೦	ಪನ್ನಗಾರಿ	ಗರುಡ
೩೧	ಆಹತ	ಹೊಡೆಯಲ್ಪಟ್ಟವ
೩೫	ಕಾಂಕ್ಷೆ	ಇಚ್ಛೆ
೩೬	ಸೊಡರು	ದೀಪ
೩೮	ಸಂಶ್ರಯ	ಆಧಾರ
೩೯	ಚಪಲೆ	ಮಿಂಚು
೩೯	ಚಂದ್ರಿಕೆ	ಬೆಳದಿಂಗಳು
೪೦	ವಿಗ್ರಹ	ಶರೀರ
೪೦	ತಲ್ಪ	ಹಾಸಿಗೆ
೪೧	ಅಂಕ	ತೊಡೆ
೪೨	ಪಾರತ್ರಿಕ	ಪರಲೋಕದ
೪೫	ಶಾಲ	ಮೀನ
೪೫	ಕೀಲಾಲ	ನೀರು
೪೫	ಪುಷ್ಕರವಾಣಿ	ಆಕಾಶವಾಣಿ
೪೬	ನಗಜೆ	ಪಾರ್ವತಿ
೪೮	ಭವಣೆ	ದುಃಖ
೪೯	ಗೀರ್ವಾಣವಾಣಿ	ದೇವ ನುಡಿ
೫೦	ಚಿಗರಿದೇರ	ಚಂದ್ರನು

ಸರ್ಗ ೨

೧	ಸಂದಿವಾಹ	ಶಿವ
೨	ಕಂತು	ಕಾಮ
೩	ಶಿಖಿ	ನವಿಲು
೮	ವಲ್ಕಲ	ನಾರಿನವಸ್ತ್ರ
೯	ಮದುಪ	ಗುಂಗಿಹುಳ
,,	ವೃಂದ	ಸಮುದಾಯ
,,	ಶೈವಲ	ಹಾಂಸೆ
,,	ಕಲಾಪ	ಗಂಟು
,,	ವಿಧು	ಚಂದ್ರ
,,	ಪರಮೆ	ಶೋಭೆ
೧೧	ಆದಾನ	ಸಂಗ್ರಹಿಸೋಣ
೧೧	ಕಂದುಕ	ಚಂಡು
೧೩	ನಿಕ್ಷೇಪ	ಇಡುಗಂಟು
೧೪	ನಲಿವು	ಸಂತೋಷ
೧೫	ಧರ್ಮಜ್ಯೇಷ್ಠ	ಧರ್ಮವೃದ್ಧ
೧೬	ಧೂಮ	ಹೊಗೆ
೧೮	ಸ್ಥಾಣು	ಶಿವ
೧೯	ಮಂಡಿಸು	ಪ್ರಾರಂಭಿಸು ಸುರುಮಾಡು
,,	ಚಂಡ	ಉಗ್ರ
೨೦	ಲೋಕಬಂಧು	ಸೂರ್ಯ
,,	ಸ್ಪಂದ	ಚಲನ
೨೧	ಛವಿ	ಕಾಂತಿ
,,	ಶ್ಯಾಮಿಕೆ	ಕಪ್ಪುತನ
,,	ದಾರುಣ	ಕಠಿಣ
೨೩	ಇಂಧನ	ಉರುವಲು
೨೬	ಉತ್ಕರ	ಸಮುದಾಯ
೨೯	ಯಮಿ	ಇಂದ್ರಿಯನಿಗ್ರಹಿ
೩೦	ದಾರ	ಹೆಂಡತಿ
೩೪	ಸಮಿದೆ	ಅರಳಿಕಟ್ಟಿಗೆ
೩೫	ವೀರುಧ	ಬಳ್ಳಿ
	ಭಾವಕಿ	ಸ್ತ್ರೀ
	ತಾವಕೀನ	ನಿನ್ನದಾದ
೪೦	ಆಸ್ಪದ	ಆಶ್ರಯ
೪೧	ಜಿಜ್ಞಾಸೆ	ತಿಳುಕೊಳ್ಳುವ ಇಚ್ಛೆ

,,	ಮಟ್ಟು	ಗುಪ್ತ
೪೨	ಭೂತಿ	ಐಶ್ವರ್ಯ
೪೪	ದಂದಶೂಕ	ಹಾವು
೪೫	ರಜನೀ	ರಾತ್ರಿ
,,	ಗರುಡಾಗ್ರಜ	ಅರುಣ
೪೯	ಕಾರ	ಕೃಷ್ಣ, ಕಪ್ಪು
,,	ನೀರೆ	ಸ್ತ್ರೀ
೫೦	ಜೊನ್ನ	ಜ್ಯೋತ್ಸ್ನಾ ಬೆಳದಿಂಗಳು
೫೧	ವರ್ಣಿ	ಬ್ರಹ್ಮಚಾರಿ
೫೩	ಅಂತರ	ಮನಸು
೫೪	ಮಹತಿ	ಮಹತ್ವ
೫೫	ನಿಶಿತ	ಹದನಾದ
೫೯	ರಹ	ಏಕಾಂತ
೬೦	ಮರುಕ	ಅಂತಃಕರಣ
೬೩	ಮಾಣವಕ	ತರುಣ, ಚಿಕ್ಕವಯಸ್ಸಿನವ
೬೪	ಸ್ಮರಣಿ	ಜಪಮಾಲೆ
,,	ಬಟು	ತರುಣ
೬೮	ಮಾನಸೌಕಸ	ಹಂಸ
೬೯	ಪರೆವು	ಹರವು
೭೨	ಭಾಲನಯನ	ಶಿವ
೭೩	ಜನಿ	ಜನ್ಮ
,,	ಕೋವಣ	ಕೌಪೀನ ಲಂಗೋಟಿ
೭೫	ವಾಸುಕಿ	ಸರ್ಪ
೭೬	ದಾರ	ಕುಟುಂಬ ಹೆಂಡತಿ
೭೮	ಕುಣಪ	ಸ್ಮಶಾನ
೭೯	ಕಪಾಲ	ತಲೆಡೋಗಿ
೮೦	ಪತಿತ	ಧರ್ಮಭ್ರಷ್ಟ ಪಾಪಿಷ್ಠ

,,	ಪದಹತಿ	ಪಾದಗಳ ಹೊಡತ	೮೩	ಸ್ತ್ರೋಕೆ	ಸ್ವಲ್ಪ
			೮೪	ಸ್ಫುರಣ	ಹಾರೋಣ ಚಲನೆ
೮೧	ವಾರಣ	ಆನೆ			
,,	ಕೃತ್ತಿವಾಸ	ಶಿವ	೮೭	ರನ್ನೆ	ರತ್ನೆಇದರತದ್ಭವ

ಸರ್ಗ ೩

೧	ತುಂಬು ವೆರೆ	ಪೂರ್ಣ ಚಂದ್ರ	೩೫	ಉಪಕರಣ	ಸಾಹಿತ್ಯ
೧	ಪೆರೆ	ಚಂದ್ರ	೩೬	ಧೂತ ಪಾಪರು	ನಿಷ್ಕಲಂಕರು
೧	ಕುಂಭಿಸೀಧರ	ಪರ್ವತ	,,	ನಿಲಯ	ಮನೆ
೨	ಪಿಕ	ಕೋಗಿಲೆ	,,	ಗಳಲು	ಗಲಗು
೪	ವಾರಣ	ಆನೆ	,,	ಅರಳು	ಹೂವು
೮	ಶೂಕರ	ಹಂದಿ	೪೧	ಕೋವಿದ	ಪಂಡಿತ
೯	ಸಮಿತಿ	ಸಮುದಾಯ	೪೩	ಜಾಯೆ	ಹೆಂಡತಿ
೧೧	ವಿತರಿಸು	ಕೊಡು	೪೫	ಉರಗ	ಹಾವು
೧೩	ಪ್ರತಿಭೆ	ಜ್ಞಾನ	೪೮	ಮಾರ್ದವ	ಮೃದುತ್ವ
೧೩	ರತಿ	ಆಸಕ್ತಿ	೪೯		
೧೪	ಶಶಿಧರ	ಶಿವ	೫೦	ಗ್ರಾವ	ಕಲ್ಲು
	ಪಾಣಿ ಪೀಡನ	ವಿವಾಹ, ಲಗ್ನ	೫೧	ಅಣಿ ಮಾದಿಗಳು	ಅಣಿಮಾ, ಮಹಿ
೧೫	ಉತ್ತುಂಗ	ಶ್ರೇಷ್ಟವಾದ			ಮಾ, ಲಘಿಮಾ,
೧೫	ಮಹತಿ	ಮಹತ್ವ			ಪ್ರಾಪ್ತಿ, ಪ್ರಾ
೧೯	ಸತ್ಯ ಸಂಧನು	ಸತ್ಯಪ್ರತಿಜ್ಞನು			ಕಾಮ್ಯ ಈಶತ್ವ,
೧೯	ಪ್ರತ್ಯಯ	ಜ್ಞಾನ,			ವಶಿತ್ವ,ಕಾಮಾವ
೨೨	ಅನಘ	ಪಾಪರಹಿತ			ಸಾಯಿತಾ
೨೩	ಧುರ	ಭಾರ	೫೨	ಪಾವಕೇಕ್ಷಣ	ಶಿವ
೨೬	ಎರಲು ಬಲ	ವಾಯುವೇಗ	೫೫	ಈಶಾನ	ಶಿವ
೨೬	ತಾರಾಪತ	ಆಕಾಶ	೫೬	ಸ್ತೂಯ ಮಾನ	ಸ್ತುತಿಸಲ್ಪಡುವ
೨೭	ಪರಿಖೆ	ಕಂದಕ	೬೧	ಮೃತ್ಯುಂಜಯ	ಶಿವ
೨೭	ವಲ್ಲಿ	ಬಳ್ಳಿ	೬೩	ಗರಕಂತ	ಮಹಾದೇವ
೨೭	ಹರಸಖ	ಕುಬೇರ	೬೪	ಪ್ರತಿಕಾರ	ಅಡ್ಡಿ
೨೮	ಹರಿ	ಸಿಂಹ, ಕುದುರೆ	೬೫	ದುರಿತ	ಪಾಪ
೩೩	ಸುಮನ	ಮನೋಹರವಾದ	,,	ಸಾಯುಜ್ಯ	ಮೋಕ್ಷ
೩೪	ಪುಂಗವ	ಪುರುಷಶ್ರೇಷ್ಠ			
೩೫	ವಂದನೀಯ	ನಮಸ್ಕಾರ ಮಾಡಲಿಕ್ಕೆ ಯೋಗ್ಯ ವಾ			

ಶುದ್ಧಪತ್ರಿಕೆ.

ಪಾನ.	ಸಾಲು	ಅಶುದ್ಧ	ಶುದ್ಧ
೨	೪	ತಜಿಂತಿಸಂಧಾಣ	ಜಿಂತಿಸುತಂತರ್ಧಾನ
೨	೨೦	ಸಿದಳ್	ಸುತ
೪	೨	ವ್ಯರ್ಥವಾಗಿಯೇ	ವ್ಯರ್ಥವಾಗಿಯೆ
೪	೨೫	ಸುರಥನಾಥ	ಸುರತನಾಥೆ
೬	೪	ಮರಿಯದೆ	ಮರೆಯದೇ
೭	೩	ಪ್ರಾರ್ಥಿಪೆ	ಪ್ರಾರ್ಥಿಪೆ
,,	೮	ಕನಿಕರದ	ಕನಿಕರದೆ
,,	೧೫	ವೃಟ್ಟುವ	ಪುಟ್ಟುವ
,,	೨೩	ಮಾಡುವೆ	ಮಾಡುವ
,,	೨೪	ತನುಜಗೆ	ತನುಜೆಗೆ
೮	೮	ಸವಿಸಿವಿದು	ಸವಿಸವಿದು
,,	೧೫	ಉಡುಧಾರ	ಉಡುದಾರ
,,	೨೦	ಆದಾನೆಕ್ಕೆ	ಆದಾನಕ್ಕೆ
೧೧	೧	ಶೋಮಲ	ಕೋಮಲ
,,	೨೨	ಮನಃಕಾಮವನು	ಮನದಿಚ್ಛೆಯನು
೧೨	೩	ಮನಕಾಮವೆನ್ನುತ	ಮನದಿಚ್ಛೆಯೆನ್ನುತ
,,	೧೬	ಮುಂಚೆಗೆ	ಮುಂಚಿಗೆ
೧೩	೧೩	ತ್ರಾಸವಾಗಲು	ಪೀಡೆಯಾಗಲು
,,	೧೯	ಕಾಂತಿಮಾನ್ಧೃತ	ಕಾಂತಿಮದ್ಧೃತ
,,	೨೬	ಗೇಯ್ದುಂತೆ	ಗೆಯ್ದಂತೆ
೧೪	೨	ವಿವುಲ	ವಿಪುಲ
,,	೬	ನೀನೆ	ನೀನೇ
,,	೧೧	ಸೋಗಿಲೇ	ಸೋಗಿಲೆ
,,	೧೫	ಶುದ್ಧ	ಶುಧ
,,	೨೬	ಪಾರಮಾರ್ಥಕೆ	ಪಾರಮಾರ್ಥ್ಯಕೆ
೧[illegible]	೪	ಎನು	ಏನು
೧೫	೧೫	ಹೊಂದೆರುವಿ	ಹೊಂದಿರುವಿ
೧೫	೬	ಜಾತಿಭಾವ	ಜಾತಿಯಭಾವ
,,	೧೧	ಹೊಂದೆರುವೆ	ಹೊಂದಿರುವೆ
೧೬	೩	ದೊರಿಕಿಸು	ದೊರಕಿಸು
,,	೩	ಶ್ರಮಪೇಕೆ?	ಶ್ರಮವೇಕೆ?
,,	೧೦	ಕಠೆಣ	ಕಠಿಣ
,,	೨೪	ಪ್ರೇಷ್ಟ	ಪ್ರೇಷ್ಠ

೨೧	೯	ಪರಿಶುದ್ದ	ಪರಿಶುದ್ಧ
೨೧	೧೬	ನಿಜನು	ನಿಜನುಡಿ
೨೪	೧೦	ಪೊರೆಯುದಕೆ	ಪೊರೆಯುವದಕ್ಕೆ
೨೪	೨೧	ಸತಿಯರುಂಧತಿ	ಸತ್ಯರುಂಧತಿ
೨೫	೧೭	ರುಷಿಗಳು	ಋಷಿಗಳು
೨೭	೧೩	ಸ್ತ್ರಿಯುಳಗಾಯನ	ಸ್ತ್ರೀ ಸುಗಾನವು
೩೭	೧೭	ವನದಿ	ವನದೆ
೩೧	೧೯	ಧೃಡ	ದೃಢ
೩೩	೧೪	ತೊರಿದವು	ತೋರಿದುದು

ವಿಜಾಪೂರ „ಗ್ರಾಮಾಧಿಕಾರೀ" ಮುದ್ರಾಲಯದಲ್ಲಿ ಮಿ. ಎಶವಂತ ಸ್ವಾಮಿರಾವ ತೆಳಗೂಳ
ಇವರು ಮುದ್ರಿಸಿ, ಮಿ. ನರಹರ ರಾಮಚಂದ್ರ ಕನಮಡಿ ವಕೀಲ ವಿಜಾಪೂರ
ಇವರು ಪ್ರಸಿದ್ಧ ಮಾಡಿದರು.